॥ ಶ್ರದ್ಧಾಹಿ ಪರಮಾ ಗತಿಃ ॥


ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ (ರಿ.) ಬೆಂಗಳೂರು - 560 004

**ನ್ಯಾಷನಲ್ ಪದವಿ ಪೂರ್ವ ಕಾಲೇಜು**

ಬಸವನಗುಡಿ, ಬೆಂಗಳೂರು – 560 004

ಸಂಚಿಕೆ : 27

ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ (ರಿ.) (1917–2017)
ಮತ್ತು ದಿವಂಗತ ಪದ್ಮಭೂಷಣ ಡಾ. ಎಚ್. ನರಸಿಂಹಯ್ಯ (1920–2020)
ಸಂಯೋಜಿತ ಶತಮಾನೋತ್ಸವ ಆಚರಣೆ.

26 ಜನವರಿ 2020


# ವಾರ್ತಾ ಸಮೀಕ್ಷೆ

# ಪದ್ಮಭೂಷಣ ಡಾ. ಎಚ್. ನರಸಿಂಹಯ್ಯ

ಜನ್ಮ ಶತಾಬ್ದಿ ವಿಶೇಷ

"ನಾನು ಮೊದಲಿನಿಂದಲೂ
ಸ್ವತಂತ್ರವಾಗಿ ಯೋಚನೆ ಮಾಡುವ
ಸ್ವಭಾವವನ್ನು
ಅಭ್ಯಾಸ ಮಾಡಿಕೊಂಡಿದ್ದೇನೆ.
ಯಾವುದನ್ನೂ ಪ್ರಶ್ನೆ ಮಾಡದೆ
ಒಪ್ಪಿಕೊಳ್ಳುವುದಿಲ್ಲ".



॥ ಶ್ರದ್ಧಾ ಹಿ ಪರಮಾ ಗತಿಃ ॥

**ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ (ರಿ) ಬೆಂಗಳೂರು**

# ಪದಾಧಿಕಾರಿಗಳು



**ಡಾ. ಎ. ಎಚ್. ರಾಮರಾವ್**
ಅಧ್ಯಕ್ಷರು



**ಶ್ರೀ ವೈ. ಜಿ. ಮಧುಸೂದನ**
ಉಪಾಧ್ಯಕ್ಷರು



**ಪ್ರೊ. ಎಸ್. ಎನ್. ನಾಗರಾಜ ರೆಡ್ಡಿ**
ಗೌರವ ಕಾರ್ಯದರ್ಶಿಗಳು



**ಡಾ. ಪಿ. ಸದಾನಂದ ಮಯ್ಯ**
ಗೌರವ ಕಾರ್ಯದರ್ಶಿಗಳು



**ಶ್ರೀ ಸಿ.ಆರ್. ಜಯಚಂದ್ರಶೆಟ್ಟಿ**
ಖಜಾಂಚಿಗಳು



**ಶ್ರೀ ವಿ. ವೆಂಕಟಶಿವಾರೆಡ್ಡಿ**
ಸಹ ಉಪಾಧ್ಯಕ್ಷರು







# ಸಂಪಾದಕೀಯ

**ಎನಿತು ಜನ್ಮದಲಿ ಎನಿತು ಜೀವರಿಗೆ**
**ಎನಿತು ನಾವು ಋಣಿಯೋ....**
**ತಿಳಿದು ನೋಡಿದರೆ ಬಾಳು ಎಂಬುದಿದು**
**ಋಣದ ರತ್ನದ ಗಣಿಯೋ**

**ಡಾ. ಜಿ. ಎಸ್. ಶಿವರುದ್ರಪ್ಪ**

**ರಾ**ಷ್ಟ್ರಕವಿ ಜಿ. ಎಸ್. ಎಸ್. ರವರ ನುಡಿಯಂತೆ ಬಾಳು ಎಂಬುದಿದು ಋಣದ ರತ್ನದ ಗಣಿ. ನಮ್ಮ ಹಿರಿಯ ಚೇತನಗಳ ಋಣದ ಮೇಲೆ ನಾವೆಲ್ಲರು ಇಂದು ನಿಂತಿದ್ದೇವೆ. ಅದು ಸಾಮಾನ್ಯದ ಋಣವಲ್ಲ ರತ್ನದ ಗಣಿ.

ಸಮಯದ ಗಾಲಿ ಚಕ್ರ ಉರುಳುತ್ತಾ ವರುಷಗಳು ಉರುಳಿ ಶತಮಾನವನ್ನು ಕಂಡ ನಮ್ಮ ಸಂಸ್ಥೆ, ಅದರ ಜೊತೆಗೆ ತಿಲಕ ಪ್ರಾಯದ ರೀತಿ ಬಂದ ಸಂಭ್ರಮವೆಂದರೆ ಡಾ. ಎಚ್. ನರಸಿಂಹಯ್ಯನವರ ಜನ್ಮ ಶತಮಾನೋತ್ಸವ ಆಚರಣೆ. ಇಂದು ನಮ್ಮ ಎನ್.ಇ.ಎಸ್. ಸಂಸ್ಥೆ ಶತಮಾನವನ್ನು ಕಂಡಿದೆ ಎಂದರೆ ಅದಕ್ಕೆ ಎಚ್ಚೆನ್ ರವರ ನಿಸ್ವಾರ್ಥ ಸೇವಾ ಮನೋಭಾವದ ಫಲವೆಂದರೆ ಅತಿಶಯೋಕ್ತಿಯಲ್ಲ.

ಡಾ. ಎಚ್. ನರಸಿಂಹಯ್ಯನವರ ಜನ್ಮ ಶತಾಬ್ದಿ ಸಂಭ್ರಮದಲ್ಲಿ ಇರುವ ನಾವು ಅನುಸರಿಸಬೇಕಾದ, ಅಳವಡಿಸಿಕೊಳ್ಳಬೇಕಾದ, ವ್ಯಕ್ತಿತ್ವವು ಅಪಾರವಿದೆ. ಸರಳ ಸಜ್ಜನಿಕೆಯ, ಹಾಸ್ಯಪ್ರಜ್ಞೆಯ ಮನೋಭಾವ ವಿರುವ ಎಚ್ಚೆನ್ ಸದಾಕಾಲ ಯೋಚಿಸುತ್ತಿದ್ದುದೇ ಸಂಸ್ಥೆಯ ಬಗೆಗೆ, ಅದರ ಏಳಿಗೆಯ ಕಡೆಗೆ. ಅವರೇ ಹೇಳಿರುವಂತೆ ಅವರದು **'ಹೋರಾಟದ ಬದುಕು'**. ಆ ಹೋರಾಟದ ಫಲವೇ ಎಚ್ಚೆನ್ ಎಂದರೆ ನ್ಯಾಷನಲ್ ಕಾಲೇಜು, ನ್ಯಾಷನಲ್ ಕಾಲೇಜು ಎಂದರೆ ಎಚ್ಚೆನ್ ಎಂದಾಗಿ ಅವರ ಜೀವನವೇ 'ತೆರೆದ ಮನ'ವಾಗಿದೆ.

ನಮ್ಮ ಸಂಸ್ಥೆಯಲ್ಲಿ ದುಡಿಯುವುದಾಗಲೀ ಓದುವುದಾಗಲೀ ಒಂದು ಪ್ರತಿಷ್ಠೆಯ ವಿಷಯ–ವಾಗಿದೆ. **"ವಿದ್ಯಾಸಂಸ್ಥೆಗಳ ಆಗುಹೋಗುಗಳನ್ನು ರೂಪಿಸುವವರು ಗಡಿಯಾರ ನೋಡಿಕೊಂಡು ಸಂಸ್ಥೆಗಳನ್ನು ಕಟ್ಟುವುದಕ್ಕಾಗುವುದಿಲ್ಲ"** ಎಂದು ಎಚ್ಚೆನ್ ಹೇಳಿರುತ್ತಾರೆ. ಇದು ಇಂದಿನ ಯುವ ಪೀಳಿಗೆ ತಿಳಿದುಕೊಳ್ಳಬೇಕಾಗಿದೆ.

ಸಂಸ್ಥೆಯ ಪ್ರಗತಿಗೆ ಹಿರಿಯರ, ತರುಣರ, ಹಲವಾರು ವರುಷಗಳ ನಿಸ್ವಾರ್ಥ ಸೇವೆಯ ಫಲವೇ ಇಂದು ಶತಮಾನದ ಸಂತಸದ ಆಚರಣೆಯಾಗಿದೆ. ಹಿರಿಯರು ನೆಟ್ಟ ಗಿಡ ಇಂದು ಹೆಮ್ಮರವಾಗಿ ಬೆಳೆದು ನಿಂತು ಫಲವನ್ನು ಕೊಡುತ್ತಿದೆ. ಅದಕ್ಕೆ ಋಣಿಯಾದ ನಾವು ಮಾಡಬೇಕಾಗಿರುವ ಕೆಲಸವೆಂದರೆ ನೀರೆರೆಯುವುದು ಅಷ್ಟೆ. ಹಾಗಾಗಿ ಸೇವಾ ಮನೋಭಾವದಿಂದ ದುಡಿದಾಗಷ್ಟೆ ಉನ್ನತಿಯನ್ನು ಸಾಧಿಸಲು ಸಾಧ್ಯ.

ವೈಯಕ್ತಿಕವಾಗಿ ನಾನು ಎಚ್ಚೆನ್ ಅವರಿಂದ ಕಲಿತದ್ದು, ಸರಳತೆ, ಸೇವಾ ಮನೋಭಾವ. ಅವರ ಜೊತೆಗಿನ ಒಡನಾಟವೇ ಇಂದು ನನಗೆ ಸದಾ ಮಾರ್ಗ–ದರ್ಶನದಂತೆ ಕಾಯುತ್ತಿದೆ. **'ಸಜ್ಜನರ ಸಂಘ ಹೆಜ್ಜೇನು ಸವಿದಂತೆ'** ಎಂಬ ಮಾತಿನ ರೀತಿ ಅವರ ಒಡನಾಟ ನಮ್ಮನ್ನು ಉತ್ತಮರನ್ನಾಗಿಸಲು ಸದಾ ಪ್ರೇರೇಪಿಸುತ್ತದೆ.

**"ಯಾವುದೇ ಶಿಕ್ಷಣ ರೀತಿಯ ಯಶಸ್ಸಿಗೆ ವಿದ್ಯಾರ್ಥಿ, ಅಧ್ಯಾಪಕ ಮತ್ತು ಪೋಷಕರ ನಿಕಟ ಸ್ನೇಹ ಸಂಬಂಧ ಅನಿವಾರ್ಯ"** ಎಚ್ಚೆನ್ ರವರ ಈ ಮಾತು ನಿಜ, ಯಾವ ಶಿಕ್ಷಣವೇ ಆಗಲಿ ತ್ರಿಭುಜದಂತಿರುವ ಅಧ್ಯಾಪಕ ಪೋಷಕರ, ವಿದ್ಯಾರ್ಥಿಗಳ ಸಂಬಂಧ ಬಲವಾಗಿರಬೇಕು. ಇದರಲ್ಲಿ ಯಾವುದೇ ತನ್ನ ಕಾರ್ಯ ಮರೆತರು ಸಮಾಜಕ್ಕೆ ಮಾರಕ. ಉತ್ತಮ ಸಮಾಜ ನಿರ್ಮಾಣಕ್ಕೆ ಮುಖ್ಯವಾದ ಕೊಂಡಿ ಎಂದರೆ ಈ ಮೂವರೇ. ಅದನ್ನು ನಾವು ಮರೆಯಬಾರದು. ಉತ್ತಮರನ್ನು ಕೊಡುಗೆಯಾಗಿ ನೀಡುವ, ಸ್ವತಃ ಕೊಡುಗೆಗಳಾಗುವ ಜವಾಬ್ದಾರಿ ಈ ಮೂವರ ಮೇಲಿರುತ್ತದೆ. ಉನ್ನತ ಸಮಾಜದ ನಿರ್ಮಾಣದತ್ತ ನಾವು ಸಾಗಬೇಕಾಗಿದೆ. ಅದೇ ವಿದ್ಯೆಯ, ವಿದ್ಯಾ ಸಂಸ್ಥೆಗಳ ಧ್ಯೇಯವಾಗಬೇಕಾಗಿದೆ.

ಈ ನಿಟ್ಟಿನಲ್ಲಿ ನಮಗೆ ಸದಾ ಬೆಂಬಲ ನೀಡುತ್ತಿರುವ ಎನ್.ಇ.ಎಸ್. ಸಂಸ್ಥೆಯ ಅಧ್ಯಕ್ಷರಾದ ಡಾ. ಎ. ಎಚ್. ರಾಮರಾವ್ ಅವರಿಗೆ, ಉಪಾಧ್ಯಕ್ಷರಾದ ಶ್ರೀ ವೈ.ಜಿ. ಮಧುಸೂದನ್ ಅವರಿಗೆ, ಗೌರವ ಕಾರ್ಯದರ್ಶಿಗಳಾದ





ಪ್ರೊ. ಎಸ್. ಎನ್. ನಾಗರಾಜರೆಡ್ಡಿ ಮತ್ತು ಡಾ. ಪಿ. ಸದಾನಂದ ಮಯ್ಯ ಅವರಿಗೆ, ಖಜಾಂಚಿಗಳಾದ ಶ್ರೀ ಸಿ. ಆರ್. ಜಯಚಂದ್ರ ಶೆಟ್ಟಿ ಅವರಿಗೆ, ಸಹ ಉಪಾಧ್ಯಕ್ಷರಾದ ಶ್ರೀ ವೆಂಕಟಶಿವಾರೆಡ್ಡಿ ಅವರಿಗೂ ಕಾಲೇಜಿನ ಪರವಾಗಿ ನಾನು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ವಾರ್ತಾಸಮೀಕ್ಷೆ ಅಂದವಾಗಿ ಮೂಡಿಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ, ಎನ್.ಇ.ಎಸ್. ಆಡಳಿತ ಮಂಡಳಿ ಸದಸ್ಯರಿಗೆ, ಗೌರ್ನಿಂಗ್ ಕೌನ್ಸಿಲ್ ಸದಸ್ಯರಿಗೆ, ಮಾಹಿತಿ ನೀಡಿದ ಎಲ್ಲಾ ವಿಭಾಗದ ಮುಖ್ಯಸ್ಥರಿಗೆ, ಅಧ್ಯಾಪಕರಿಗೆ, ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳಿಗೆ, ಸಕಾಲದಲ್ಲಿ ವಾರ್ತಾಸಮೀಕ್ಷೆ–ಯನ್ನು ಅಂದವಾಗಿ ಮುದ್ರಿಸಿ ಕೊಟ್ಟಿರುವ ಅಕ್ಷರ ಪ್ರಿಂಟರ್ಸ್ ಮಾಲೀಕರು ಹಾಗೂ ಸಿಬ್ಬಂದಿ ವರ್ಗಕ್ಕೆ ವಂದನೆಗಳು.

ಈ ಸಂಚಿಕೆಯನ್ನು ವೈಜ್ಞಾನಿಕ ಪ್ರತಿಪಾದಕ, ಪದ್ಮಭೂಷಣ ಡಾ. ಎಚ್ಚೆನ್ ರವರಿಗೆ ಅರ್ಪಿಸುತ್ತಿದ್ದೇನೆ.

**ಪ್ರೊ|| ವಿ. ನಾರಾಯಣ ಸ್ವಾಮಿ**
ಪ್ರಾಂಶುಪಾಲರು ಮತ್ತು ಪ್ರಧಾನ ಸಂಪಾದಕರು

## ಸಂಪಾದಕ ಮಂಡಳಿ



**ಪ್ರಾಂಶುಪಾಲರೊಂದಿಗೆ ಶ್ರೀಮತಿ ಪಲ್ಲವಿಶ್ರೀ ಎಂ.ಪಿ., ಶ್ರೀ ವೇಲುನಿರಂಜನ್, ಪ್ರೊ|| ಬಿ. ಎಸ್. ವಿಶ್ವನಾಥ್ ಶ್ರೀ ಬಾಲಕೃಷ್ಣದತ್ತ ಕಲಭಾಗ, ಶ್ರೀ ರವಿ ಕುಮಾರ್ ಕೆ.ಬಿ., ಶ್ರೀಮತಿ ತನುಜ ಆರ್.**

## 2019-20ನೇ ಸಾಲಿನ ಒಂದು ಸಂಕ್ಷಿಪ್ತ ವರದಿ

**2019–20ನೇ** ಸಾಲಿನ ಪ್ರಥಮ ಪದವಿಪೂರ್ವ ತರಗತಿಗಳ ಉದ್ಘಾಟನಾ ಸಮಾರಂಭ ದಿನಾಂಕ 03.06.2019, ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ಕೆ. ಎಸ್. ಜಿ. ಶಂಕರ್ Former Vice President & Chief Quality Officer, Symphony Services Ltd. ಅವರಿಂದ ನೆರವೇರಿತು.

ನಮ್ಮ ಸಂಸ್ಥೆಯ ಅಧ್ಯಕ್ಷರಾದ ಡಾ. ಎ. ಎಚ್. ರಾಮರಾವ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಮತ್ತು ಸಂಸ್ಥೆಯು ಗೌರವ ಕಾರ್ಯದರ್ಶಿಗಳಾದ ಪ್ರೊ. ಎಸ್. ಎನ್. ನಾಗರಾಜ ರೆಡ್ಡಿಯವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ 2018–19ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿಶ್ವನಾಥ್ ಎಂ. ಭಾರ್ಗವ್ ಜಿ. ಎಸ್. ಶಶಾಂಕ್ ಆರ್. ಮನೋಜ್ ಮೌನಿ ಎಸ್. ಗೀತಾಂಜಲಿ ಪಿ., ಅಭಿಷೇಕ್ ಎಂ., ಅನಂತ್ ಕುಮಾರ್ ವಿ., ಪ್ರಿಯಾಂಕ ಎಸ್., ವೈಷ್ಣವಿ, ಮೇಘ, ಇವರಿಗೆ ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನಗಳನ್ನು ನೀಡಿ ಗೌರವಿಸಲಾಯಿತು.

ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶನದನ್ವಯ ವಿದ್ಯಾರ್ಥಿಗಳಿಗೆ ಕಿರುಪರೀಕ್ಷೆ, ಅರ್ಧವಾರ್ಷಿಕ ಪರೀಕ್ಷೆ ಹಾಗೂ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ಕ್ರಮವಾಗಿ ನಡೆಸಲಾಗುತ್ತಿದೆ.

ನಮ್ಮ ಸಂಸ್ಥೆಯ ಆಶ್ರಯದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಭ್ರಮ ಶ್ರದ್ಧೆ, ರಾಷ್ಟ್ರಭಕ್ತಿ–ಯೊಂದಿಗೆ ಆಚರಿಸಲಾಯಿತು. ಅಂದು ಡಾ. ಎ. ಎಚ್. ರಾಮರಾವ್, ಅಧ್ಯಕ್ಷರು, ಎನ್.ಇ.ಎಸ್. ಆಫ್ ಕರ್ನಾಟಕ (ರಿ) ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಹಾಗೆಯೇ ಗಾಂಧಿ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಗಾಂಧೀಜಿಯವರ 150ನೇ ಜನ್ಮದಿನವನ್ನು ಆಚರಿಸಲಾಯಿತು. ಅಂದು ಶ್ರೀ ಎನ್.ಎಸ್. ಶಂಕರ್, ಹಿರಿಯ ಪತ್ರಕರ್ತರು. ಅವರು





ಮುಖ್ಯ ಅತಿಥಿಗಳಾಗಿ ಆಗಮಿಸಿ ಮಹಾತ್ಮ ಗಾಂಧಿಯವರ ವಿಚಾರಧಾರೆಯ ಬಗ್ಗೆ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಗಾಂಧಿ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ನಡೆದ ಚರ್ಚೆ, ಪ್ರಬಂಧ ಹಾಗೂ ರಸಪ್ರಶ್ನೆ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಅಮೇರಿಕಾದ ಕೋಡ್. ಓಆರ್‌ಜಿ ಸಂಸ್ಥೆಯು 09–12–2019ರಿಂದ 15–12–2019ರವರೆಗೆ ಆಯೋಜಿಸಿದ್ದ 'ಅವರ್ ಆಫ್ ಕೋಡ್' ಎಂಬ ಆನ್‌ಲೈನ್ ಉಚಿತ ತರಬೇತಿ ಕಾರ್ಯಕ್ರಮದಲ್ಲಿ ನಮ್ಮ ಸಂಸ್ಥೆಯ ಸುಮಾರು 2000 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿನಾಂಕ 27.12.2019 ರಂದು ಕಾಲೇಜಿನ 74ನೇ ವಾರ್ಷಿಕೋತ್ಸವ ಹಾಗೂ ಪೋಷಕರ ದಿನಾಚರಣೆ–ಯನ್ನು ಆಚರಿಸಲಾಯಿತು. ಕಾರ್ಯಕ್ರಮಕ್ಕೆ ಪ್ರೊ. ಎನ್. ರಮೇಶ್, ವಿಶ್ರಾಂತ ಪ್ರಾಂಶುಪಾಲರು ನ್ಯಾಷನಲ್ ಕಾಲೇಜ್, ಜಯನಗರ, ಬೆಂಗಳೂರು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ವಿದ್ಯಾರ್ಥಿಗಳನ್ನು ಮತ್ತು ಪೋಷಕರನ್ನು ಉದ್ದೇಶಿಸಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷರಾದ ಡಾ. ಎ. ಎಚ್. ರಾಮರಾವ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.



**ಶ್ರೀ ಕೆ. ಎಸ್. ಜಿ. ಶಂಕರ್ ರವರಿಂದ ಪ್ರಥಮ ಪದವಿ ಪೂರ್ವ ತರಗತಿಗಳ ಉದ್ಘಾಟನೆ**



**ಕಾಲೇಜಿನ 74ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರೊ. ಎನ್. ರಮೇಶ್‌ರವರಿಗೆ ಸನ್ಮಾನ**

## ಎನ್.ಸಿ.ಸಿ. ಭೂದಳ ವರದಿ

**2019–2020ನೇ** ಸಾಲಿಗೆ ಸಿ.ಎಸ್.ಯು.ಒ. ಕರಣ್‌ಸಿಂಗ್ ತನ್ವರ್‌ನನ್ನು ಎಸ್. ಡಿ. ಸೀನಿಯರ್ ಆಗಿ ಹಾಗೂ ಸಿ.ಜೆ.ಯು.ಒ. ಅಪರ್ಣ ಕೆ. ಸಿ.ಜೆ.ಯು.ಒ ಚರಣ್ ಆರ್., ಕಿಶೋರ್ ಆರ್., ಮನೋಜ್ ಕುಮಾರ್ ಮತ್ತು ಎಸ್. ಪಿ. ರವರನ್ನು ಸಿ.ಎಸ್.ಎಂ. ಆಗಿ, ಶ್ರೀ ನಿಧಿ ಆರ್. ಮತ್ತು ಸಿರೀಶಾ ಹೆಚ್. ಎಸ್. ರವರನ್ನು ಸಿ.ಕ್ಯೂ.ಎಂ.ಎಸ್. ಆಗಿ ಆಯ್ಕೆ ಮಾಡಲಾಯಿತು. ದಿನಾಂಕ 18.07.2019ರಂದು 36 ವಿದ್ಯಾರ್ಥಿಗಳನ್ನು ಸೀನಿಯರ್ ಡಿವಿಷನ್‌ಗೆ ಮತ್ತು 20 ವಿದ್ಯಾರ್ಥಿಗಳನ್ನು ಸೀನಿಯರ್ ವಿಂಗ್‌ಗಾಗಿ ಸುಬೆದಾರ್ ಮೇಜರ್ ಕುಲ್‌ದೀಪ್‌ಸಿಂಗ್ ಮತ್ತು ಹವಾಲ್ದಾರ್ ಮಹಾವೀರ್ ಜೈನ್ ರವರ ನೇತೃತ್ವದಲ್ಲಿ ಮೇಜರ್ ಆರ್. ನಾಗರಾಜ್ ರವರ ಸಮ್ಮುಖದಲ್ಲಿ ಆಯ್ಕೆ ಮಾಡಲಾಯಿತು. ದಿನಾಂಕ 25.02.2019 ರಂದು ಕಂಪನಿಯು ಎನ್.ಸಿ.ಸಿ. ಸಮಾರೋಪ ಸಮಾರಂಭವನ್ನು ಆಚರಿಸಿತು. ಈ ಸಮಾರಂಭದಲ್ಲಿ ನೌಕಾದಳದ ಕೇಶವ ಜೆ. ಮತ್ತು ಜಯನಗರ ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿನಿ ಜಾಹ್ನವಿ ವಿ. ಸಿಂಗ್ ಅವರನ್ನು 2019ನೇ ಜನವರಿ 26 ರಂದು ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ್ದಕ್ಕಾಗಿ ಸನ್ಮಾನಿಸಲಾಯಿತು. ಈ ಸಮಾರಂಭದಲ್ಲಿ ಲೆಫ್ಟಿನೆಂಟ್ ಕರ್ನಲ್ ಸಂತೋಷ ಕುಮಾರ್, ಎ.ಸಿ.ಪಿ. ಪಾಷಾ ಹಾಗೂ ಸುಬೇದಾರ್ ಮೇಜರ್ ಕುಲ್‌ದೀಪ್ ಸಿಂಗ್ ರವರು ಭಾಗವಹಿ–ಸಿದ್ದರು. ಸಿ.ಜೆ.ಯು.ಒ. ಚರಣ್ ಆರ್. 13.04.2019 ರಿಂದ 25.04.2019 ರವರೆಗೆ ಸಿಖಂದರಾಬಾದ್ ಅಲ್ಲಿ ನಡೆದ ಇ.ಎಂ.ಇ. ಆಟ್ಯಾಚ್‌ಮೆಂಟ್ ಕ್ಯಾಂಪ್‌ನಲ್ಲಿ ಭಾಗವಹಿಸಿದ್ದನು. 05.06.2019 ರಂದು ಕಂಪನಿಯು 'ವಿಶ್ವ ಪರಿಸರದಿನ' ಪ್ರದೂಷಣ ರಹಿತ ದಿನವಾಗಿ ಆಚರಿಸಲಾಯಿತು. ದಿನಾಂಕ 21.06.2019 ರಂದು ಮಾಣಿಕ್‌ಷಾ ಪರೇಡ್ ಗ್ರೌಂಡ್‌ನಲ್ಲಿ ನಡೆದ ಅಂತರ್







ರಾಷ್ಟ್ರೀಯ ಯೋಗ ದಿನದಲ್ಲಿ ನಮ್ಮ ಕಾಲೇಜಿನ 50 ಕೆಡೆಟ್‌ಗಳು ಮೇಜರ್ ಆರ್. ನಾಗರಾಜ್ ರವರ ನೇತೃತ್ವದಲ್ಲಿ ಭಾಗವಹಿಸಿದ್ದರು. 26.07.2019 ರಂದು ಕಂಪನಿಯು 'ಕಾರ್ಗಿಲ್ ವಿಜಯ್ ದಿವಸ್' ಅನ್ನು ಆಚರಿಸಿತು ಕಾರ್ಯಕ್ರಮದಲ್ಲಿ ಕಾಲೇಜಿನ ಹಿರಿಯ ವಿದ್ಯಾರ್ಥಿಯಾದ ಕರ್ನಲ್ ಎಸ್. ಆರ್. ಕಿರಣ್ ರವರು ಭಾಗವಹಿಸಿದ್ದರು. ದಿನಾಂಕ 15.08.2019 ರಂದು ನ್ಯಾಷನಲ್ ಕಾಲೇಜಿನ ಮೈದಾನದಲ್ಲಿ 73ನೇ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು. ದಿನಾಂಕ 24.08.2019 ರಂದು ಕಂಪನಿಯ ಕೆಡೆಟ್‌ಗಳು SSB Sure Shot Academy ಯಲ್ಲಿ ಒಂದು ದಿನದ ತರಬೇತಿಯನ್ನು ಪಡೆದುಕೊಂಡರು. ಮೇಜರ್ ವಿ.ಪಿ.ಎಸ್. ಬಕುನಿ ರವರು ತರಬೇತಿ ನೀಡಿದರು 02.08.2019 ರಿಂದ 12.08.2019 ರವರೆಗೆ ನಡೆದ TSC/PREIGC-03 ಕ್ಯಾಂಪ್‌ನಲ್ಲಿ ಸಿ.ಪಿ.ಎಸ್. ನಿತಿನ್ ಕೆ. ಎನ್. ಕೆಡೆಟ್ ಪ್ರಜ್ವಲ್ ಬಿ. ಎ., ಎಸ್.ಜಿ.ಟಿ. ಕೃಪ ಎಸ್. ಎಮ್. ಮತ್ತು ಸಿ.ಪಿ.ಎಲ್. ಶೋಭಿತ ಡಿ. ರವರು ಭಾಗವಹಿಸಿದ್ದರು ಈ ನಾಲ್ಕು ಕೆಡೆಟ್‌ಗಳು ಬಳ್ಳಾರಿ ಮತ್ತು ತುಮಕೂರಿನಲ್ಲಿ ನಡೆದ ಟಿ.ಎಸ್.ಸಿ/ಐಎನ್ಸಿ ಶಿಬಿರದಲ್ಲಿ ಭಾಗವಹಿಸಿದ್ದರು.

ಸಿ.ಎಸ್.ಎಂ. ಕಿಶೋರ್, ಎಸ್.ಜಿ.ಟಿ. ಅನಿಲ್‌ಕುಮಾರ್ ಇ. ರವರು ವಾನಾರ್‌ಪೇಟೆ, ಟ್ರಿನಿಟಿಯಲ್ಲಿ ನಡೆದ ಪಿ.ಸಿ.ಟಿ.ಸಿ. ಅಟ್ಯಾಚ್‌ಮೆಂಟ್ ಕ್ಯಾಂಪ್‌ನಲ್ಲಿ ಭಾಗವಹಿಸಿದ್ದರು.

ದಿನಾಂಕ 19.10.2019 ರಂದು ಕಂಪನಿಯು ಜಲಶಕ್ತಿ ಅಭಿಯಾನವನ್ನು ಆಚರಿಸಿತು. ಸುಬೇದಾರ್ ಮನ್‌ಮೋಹನ್ ಸಿಂಗ್ ಮತ್ತು ಮೇಜರ್ ಆರ್. ನಾಗರಾಜ್‌ರವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಪವಿತ್ರ ಜಲವನ್ನು ಹೇಗೆ ಕಾಪಾಡಿಕೊಳ್ಳಬೇಕೆಂದು ವಿವರಿಸಿದರು.

ದಿನಾಂಕ 15.11.2019 ರಿಂದ 24.11.2019 ರವರಿಗೆ ಜಾಲಹಳ್ಳಿಯಲ್ಲಿ ನಡೆದ ಆರ್‌ಡಿಸಿ/ಐಜಿಸಿ ಕ್ಯಾಂಪ್‌ನಲ್ಲಿ ಸಿ.ಎಸ್.ಯು.ಓ. ಕರಣ್‌ಸಿಂಗ್, ಸಿ.ಎಸ್.ಎಂ. ಮನೋಜ್ ಕುಮಾರ್ ಎಸ್.ಪಿ., ಕೆಡೆಟ್ ರಂಜನ್ ಆರ್. ಮತ್ತು ಎಸ್‌ಜಿಟಿ ತರುಣ್ ಸಿಂಗ್ ರವರು ಭಾಗವಹಿಸಿದ್ದರು.

ದಿನಾಂಕ 7.12.2019 ರಂದು 'ಸ್ವಚ್ಛ ಭಾರತ ಪಕ್‌ವಾಡ'ದ ಅಂಗವಾಗಿ, ಪ್ಲಾಸ್ಟಿಕ್ ಬಳಕೆ ಮತ್ತು ಅದರಿಂದ ಆಗುವ ಅಪಾಯಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸುವ ಸಲುವಾಗಿ ಕಂಪನಿಯು ಜಾಥಾವನ್ನು ಏರ್ಪಡಿಸಿತ್ತು. ಈ ಜಾಥಾದಲ್ಲಿ ಪ್ರಾಂಶುಪಾಲರಾದ, ಡಾ. ಅನ್ನಪೂರ್ಣಮ್ಮ, ಮೇಜರ್ ಆರ್. ನಾಗರಾಜ್, ಸಿಎಚ್‌ಎಂ ದಯಾಳ್‌ಚಂದ್‌ರವರು ಭಾಗವಹಿಸಿದ್ದರು.

ದಿನಾಂಕ 06.12.2019 ರಂದು 04 ಕೆಡೆಟ್‌ಗಳು ವಿಧಾನಸೌಧದಲ್ಲಿ ನಡೆದ Armed Forces Flag day ನಲ್ಲಿ ಭಾಗವಹಿಸಿದ್ದರು

ದಿನಾಂಕ 03.12.2019 ರಿಂದ 10.12.2019 ರವರೆಗೆ ಕಡಪದಲ್ಲಿ ನಡೆದ ಆಲ್ ಇಂಡಿಯಾ ಟ್ರೆಕ್ಕಿಂಗ್ ಎಕ್ಸ್‌ಪೆಡಿಷನ್ ನಲ್ಲಿ ಕೆಡೆಟ್ ಪ್ರಜ್ವಲ್ ಬಿ. ಎ. ಮತ್ತು ಕೆಡೆಟ್ ತೇಜಸ್ ರವರು ಭಾಗವಹಿಸಿದ್ದರು.

ದಿನಾಂಕ 05.12.2019 ರಿಂದ 14.12.2019 ರವರೆಗೆ ನಡೆದ Pre RDC-2 ಶಿಬಿರದಲ್ಲಿ CSUO ಕರಣ್ ಸಿಂಗ್ CSM ಮನೋಜ್ ಕುಮಾರ್ ಎಸ್. ಪಿ. ಮತ್ತು Sgt. ತರುಣ್ ಸಿಂಗ್ ರವರು ಭಾಗವಹಿಸಿದ್ದರು.

ದಿನಾಂಕ 08.12.2019 ರಿಂದ 18.12.2019 ರವರೆಗೆ ಸಿಕಂದರಾಬಾದ್‌ನಲ್ಲಿ ನಡೆದ ಇ.ಎಂ.ಇ. ಅಟ್ಯಾಚ್‌ಮೆಂಟ್ ಕ್ಯಾಂಪ್‌ನಲ್ಲಿ CQMS ಶ್ರೀ ನಿಧಿ ಭಾಗವಹಿಸಿದ್ದರು.

ದಿನಾಂಕ 28.12.2019 ರಂದು ಕಂಪನಿಯ ವತಿಯಿಂದ ಬಿಳಿಕಲ್ಲು ರಂಗನಾಥ ಸ್ವಾಮಿ ಬೆಟ್ಟಕ್ಕೆ ಚಾರಣ







ಯಾತ್ರೆಯನ್ನು ಏರ್ಪಡಿಸಲಾಗಿತ್ತು. ಎಲ್ಲಾ ಕೆಡೆಟ್‌ಗಳು ಮೇಜರ್ ಆರ್. ನಾಗರಾಜ್ ರವರ ಮುಂದಾಳತ್ವದಲ್ಲಿ. ಹವಾಲ್ದಾರ್ ನಿರ್ಮಲ್ ಸಿಂಗ್ ರವರೊಂದಿಗೆ ಚಾರಣಯಾತ್ರೆಯಲ್ಲಿ ಭಾಗವಹಿಸಿದ್ದರು.

CSUO ಕರಣ್ ಸಿಂಗ್ ತನ್ವರ್ ಮತ್ತು SGT ತರುಣ್ ಸಿಂಗ್ ರವರು, 26ನೇ ಜನವರಿ 2020 ರಲ್ಲಿ ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆಯಾಗಿದ್ದಾರೆ. ಇದಕ್ಕೆ ಕಂಪನಿಯು ಅವರನ್ನು ಅಭಿನಂದಿಸುತ್ತದೆ. ಇದು ನಮ್ಮ ಕಾಲೇಜಿಗೆ 2019–20ನೇ ಸಾಲಿನ ಹೆಮ್ಮೆಯ ಗರಿಯಾಗಿದೆ. ಈ ಇಬ್ಬರೂ ಕೆಡೆಟ್‌ಗಳು ದೆಹಲಿಯ ರಾಜ್‌ಪಥ್‌ನಲ್ಲಿ ನಡೆಯುವ ಪರೇಡ್‌ನಲ್ಲಿ ಭಾಗವಹಿಸಲು ಆಯ್ಕೆಯಾಗಿರುವುದು ಕಾಲೇಜಿಗೆ ಮತ್ತು ಕಂಪನಿಗೆ ಸಂತೋಷದ ವಿಷಯವಾಗಿದೆ.




## ಎನ್.ಸಿ.ಸಿ. ನೌಕಾದಳ

ಎನ್.ಸಿ.ಸಿ. ನೌಕಾದಳ ನಮ್ಮ ಕಾಲೇಜಿನಲ್ಲಿ ಸುಮಾರು ಅರ್ಧ ಶತಮಾನಕ್ಕೂ ಮಿಗಿಲಾಗಿ ತನ್ನ ಕಾರ್ಯವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದೆ. ಸದರಿ ಲೆಫ್ಟಿನೆಂಟ್ ಡಾ. ನಿಂಗರಾಜು ರವರ ನೇತೃತ್ವದಲ್ಲಿ ಈ ವರ್ಷವೂ ನಮ್ಮ ಕೆಡೆಟ್ಗಳು ಹಲವಾರು ಶಿಬಿರ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಸಾಧನೆಯನ್ನು ಮೆರೆದಿದ್ದಾರೆ. 2019 ರ ಗಣರಾಜ್ಯೋತ್ಸವ ಪರೇಡ್, ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಕಾರ್ಯಕ್ರಮವನ್ನು ಕರ್ನಾಟಕ ಮತ್ತು ಗೋವ ಎನ್.ಸಿ.ಸಿ. ನಿರ್ದೇಶ–ನಾಲಯದ ಮೂಲಕ ನಮ್ಮ ಕಾಲೇಜನ್ನು ಪ್ರತಿನಿಧಿಸಿ ಕೆಡೆಟ್ ಕ್ಯಾಪ್ಟನ್ ಕೇಶವ್ ಜೆ. ರವರು ಗಾರ್ಡ್ ಆಫ್ ಆನರ್‌ನಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ ಮತ್ತು 2020ರ ಗಣರಾಜ್ಯೋತ್ಸವ ಪರೇಡ್‌ಗೆ ನಮ್ಮ ಕಾಲೇಜಿನ ಕೆಡೆಟ್ ನಿಖಿಲ್ ಎಸ್. ಆಯ್ಕೆಯಾಗಿರುತ್ತಾರೆ.

ರಾಷ್ಟ್ರ ಮಟ್ಟದ ಯಾಚಿಂಗ್ ರಘಟ್ಟ ಕ್ಯಾಂಪಿನಲ್ಲಿ ಕೆಡೆಟ್ ಪಿ. ವರ್ಷರವರು ಭಾಗವಹಿಸಿ 'ಐಎನ್‌ಎಸ್ ಚಿಲ್ಕ' ಯುದ್ಧ ನೌಕೆಯಲ್ಲಿ ಸೈಲಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ ಮತ್ತು ಮುಂದಿನ ವಿಶೇಷ ಯಾಚಿಂಗ್ ರಘಟ್ಟ ಕ್ಯಾಂಪಿಗೂ ಆಯ್ಕೆಯಾಗಿರುತ್ತಾರೆ. ಮಹಾರಾಷ್ಟ್ರದ ಮಿಲಿಟರಿ ತರಬೇತಿ ಅಕಾಡೆಮಿಯಲ್ಲಿ ನಡೆಯುವ ಎನ್.ಎಸ್.ಬಿ ಆಯ್ಕೆ ಶಿಬಿರದಲ್ಲಿ ಸೀನಿಯರ್ ಕೆಡೆಟ್ ಕ್ಯಾಪ್ಟನ್ ಎಸ್. ಸೋಮಶೇಖರ್ ರವರು 29 ಏಪ್ರಿಲ್ 2019 ರಿಂದ 9 ಮೇ 2019ರವರೆಗೆ ಭಾಗವಹಿಸಿದ್ದರು. ಎಸ್. ಸೋಮಶೇಖರ್ ಮತ್ತು ಪಿ.ಒ. ಕೆಡೆಟ್ ಕೆ. ಎಸ್. ಭವನ್‌ರವರು ಮುಂಬೈಯಲ್ಲಿ ನಡೆದ ಶಿಪ್ ಅಟ್ಯಾಚ್‌ಮೆಂಟ್ ಕ್ಯಾಂಪಿನಲ್ಲಿ ಭಾಗವಹಿಸಿ 'ಐಎನ್‌ಎಸ್ ಮೈಸೂರು' ಎಂಬ ಬೋಟನ್ನು ಸೈಲಿಂಗ್ ಮಾಡಿ ಉತ್ತಮ ಸೈಲರ್‌ಗಳೆಂದು ಗುರುತಿಸಲ್ಪಟ್ಟರು. ಎಲ್.ಡಿ. ಕೆಡೆಟ್ ಮಧುರ, ಎಸ್. ಆರ್. ಕೆಡೆಟ್ ಗಿರೀಶ್‌ರವರು ಬೇಸಿಕ್ ಲೀಡರ್‌ಶಿಪ್ ಶಿಬಿರದಲ್ಲಿ ಮತ್ತು ಸಿ.ಒ. ಕೆಡೆಟ್ ಕೆ.ಎಸ್. ಭವನ್ ಮತ್ತು ಎಲ್‌ಡಿ ಕೆಡೆಟ್ ಮಧುರ ಎಸ್. ಆರ್. ರವರು 'ಏಕ್ ಭಾರತ್ ಶ್ರೇಷ್ಠ ಭಾರತ್' ಶಿಬಿರದಲ್ಲಿ ಭಾಗವಹಿಸಿ ಯಶಸ್ವಿಯಾಗಿ ಮುಗಿಸಿಕೊಂಡು ಬಂದಿರುತ್ತಾರೆ. ಅಲ್ಲಿ ನಡೆದ ಉಪನ್ಯಾಸ ಸ್ಪರ್ಧೆಯಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ. ಕೆಡೆಟ್ ಕರಣ್ ಜಿ. ಮತ್ತು ಪ್ರಸನ್ನ ಎನ್. ರವರು ಆಂಧ್ರಪ್ರದೇಶ್ ಟ್ರಕ್ಕಿಂಗ್ ಕ್ಯಾಂಪ್‌ನಲ್ಲಿ, ಪಿ. ಒ. ಕೆಡೆಟ್ ಕೆ. ಎಸ್. ಭವನ್ ಮತ್ತು ಕೆಡೆಟ್ ಸಿದ್ಧಿವಿನಾಯಕ ಬಿ. ಎನ್. ನರ್ಮದ ಟ್ರಕ್ಕಿಂಗ್ ಕ್ಯಾಂಪ್ ಗುಜರಾತ್‌ನಲ್ಲಿ ಭಾಗವಹಿಸಿ ಅಲ್ಲಿ ನಡೆದ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಪಡೆದಿರುತ್ತಾರೆ. ಬೆಂಗಳೂರಿನ ಹಲಸೂರು ಕೆರೆಯಲ್ಲಿ ನಡೆದ ವಾಟರ್‌ಮನ್‌ಶಿಪ್ ಕ್ಯಾಂಪಿನಲ್ಲಿ 15 ಕೆಡೆಟ್‌ಗಳು ಭಾಗವಹಿಸಿರುತ್ತಾರೆ ರಾಷ್ಟ್ರಮಟ್ಟದ ನವಸೈನಿಕ್ ಕ್ಯಾಂಪಿನಲ್ಲಿ ಭಾಗವಹಿಸಿದ ಪಿ. ಒ. ಕೆಡೆಟ್ ಉಮಾಶಂಕರ್ ಎನ್. ಕಂಚಿನ ಪದಕ ಪಡೆದು–ಕೊಂಡಿದ್ದಾರೆ ಕಾರವಾರದಲ್ಲಿ ನಡೆದ 'ಓಷಿಯನ್ ಸೈಲಿಂಗ್' ಕ್ಯಾಂಪಲ್ಲಿ ಕೆಡೆಟ್ ಮಂಜುನಾಥ್









ಭಾಗವಹಿಸಿರುತ್ತಾರೆ. ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಐಟಿಸಿ ಕ್ಯಾಂಪಿನಲ್ಲಿ ಎನ್.ಸಿ.ಸಿ. ಅಧಿಕಾರಿಗಳು ಹಾಗೂ ದ್ವಿತೀಯ ಮತ್ತು ತೃತೀಯ ವರ್ಷದ ಕೆಡೆಟ್‌ಗಳು ಭಾಗವಹಿಸಿರುತ್ತಾರೆ ಇಷ್ಟೇ ಅಲ್ಲದೇ ನಮ್ಮ ಯುನಿಟ್‌ನಿಂದ ರಕ್ತದಾನ ಶಿಬಿರ ಸ್ವಚ್ಛಭಾರತ್ ಅಭಿಯಾನ, ಪರಿಸರ ಜಾಗೃತಿ, ಜಾಥಾ, ಏಕತಾ ದಿವಸ್, ಯೋಗ ದಿನಾಚರಣೆ ಕಾರ್ಯ–ಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. **ಎನ್.ಸಿ.ಸಿ. ನೌಕಾದಳದ ಅಧಿಕಾರಿ–ಯಾದ ಡಾ. ನಿಂಗರಾಜು ರವರು ಸಬ್‌ಲೆಫ್ಟಿನೆಂಟ್ ಶ್ರೇಣಿಯಿಂದ ಲೆಫ್ಟಿನೆಂಟ್ ಆಗಿ ಬಡ್ತಿ ಹೊಂದಿ–ರುತ್ತಾರೆ.** ಇವರನ್ನು ಕಾಲೇಜು ಮತ್ತು ಆಡಳಿತ ಮಂಡಳಿ ಅಭಿನಂದಿಸುತ್ತದೆ.



ಕೇಶವ ಜೆ.



ನಿಖಿಲ್ ಎಸ್.



ವರ್ಷ ಪಿ.




ಸೋಮ ಶೇಖರ್ ಎನ್.



ಉಮಾ ಶಂಕರ ಎನ್.



ನಮ್ಮ ಕಾಲೇಜಿನ ಗ್ರಂಥ ಭಂಡಾರ

## ಗ್ರಂಥಾಲಯ ವಿಭಾಗ

**ಕಾಲೇಜಿನ** ಗ್ರಂಥಾಲಯವು ಮೂರು ಅಂತಸ್ತಿನ ಭವ್ಯ ಕಟ್ಟಡವನ್ನು ಹೊಂದಿದ್ದು 90 ಸಾವಿರ ಪುಸ್ತಕಗಳು, 800 ವಿವಿಧ ವಿಷಯಗಳ ಸಿ.ಡಿ.ಗಳು, ಇ–ಪುಸ್ತಕಗಳನ್ನು ಒಳಗೊಂಡ ಇ–ಗ್ರಂಥಾಲಯ ಸೌಲಭ್ಯವನ್ನು ಹೊಂದಿರುತ್ತದೆ. ಇತ್ತೀಚೆಗೆ ಸೈನೆಜ್ ವ್ಯವಸ್ಥೆ ಕಲ್ಪಿಸಲಾಗಿದ್ದು ಈ ವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರುಗಳಿಗೆ ದಿನ ಪತ್ರಿಕೆಗಳಲ್ಲಿ ಬರುವ ಸುದ್ದಿ, ವಾರಪತ್ರಿಕೆಗಳ ವಿವರ ಹಾಗೂ ಗ್ರಂಥಾಲಯಕ್ಕೆ ಸೇರ್ಪಡೆಯಾಗುವ ಹೊಸ ಪುಸ್ತಕ ವಿವರವನ್ನು ಬಿತ್ತರಿಸುತ್ತಿದೆ. ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋ–ಭಾವನೆಯನ್ನು ಹೆಚ್ಚಿಸಲು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಮಸ್ತಕಗಳನ್ನು ಗ್ರಂಥಾಲಯಕ್ಕೆ ಸೇರಿಸಿದ್ದು ವಿದ್ಯಾರ್ಥಿಗಳಿಂದ ಮತ್ತು ಅಧ್ಯಾಪಕರುಗಳಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ. ಇತ್ತೀಚೆಗೆ ಗ್ರಂಥಾಲಯಕ್ಕೆ ಲಿಫ್ಟ್ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಹಾಗೆಯೇ ಡಾ. ಬಿ.ಪಿ. ನಂಜುಂಡಯ್ಯ ಮತ್ತು ಶ್ರೀಮತಿ ಶಾರದಮ್ಮ ಅವರ ಸ್ಮಾರಕ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಹಾಗು ಸಾಮಾನ್ಯ ಜ್ಞಾನ ಸ್ಪರ್ಧೆಗೆ ಸಮಾಜ ಶಾಸ್ತ್ರದ ವಿಭಾಗದ ಶ್ರೀ ಸಿ. ಕೇಶವ್ ಕುಮಾರ್ ಮತ್ತು ಗ್ರಂಥಾಲಯ ವಿಭಾಗದಿಂದ ಶ್ರೀ ಭರತ್ ರವರು ತೀರ್ಪುಗಾರರಾಗಿದ್ದು ಈ ಕೆಳಕಂಡ ವಿದ್ಯಾರ್ಥಿಗಳು ಬಹುಮಾನವನ್ನು ಪಡೆದಿರುತ್ತಾರೆ.



ಪ್ರಥಮ ಬಹುಮಾನ ರಿಷಿತಾ ಬಿ. ಎಸ್.ಪ್ರಥಮ ಪಿ.ಯು.ಸಿ. 'ಸಿ'



ದ್ವಿತೀಯ ಬಹುಮಾನ ಮಂಜುಳ – ಪ್ರಥಮ ಪಿ.ಯು.ಸಿ. 'ಡಿ'

ತೃತೀಯ ಬಹುಮಾನ ಮನೋಜ್ ಎ. ಸಿ. – ಪ್ರಥಮ ಪಿಯುಸಿ 'ಡಿ'





## ಕ್ರೀಡಾ ವರದಿ

ನಮ್ಮ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಸಿ. ಆರ್. ಪ್ರಕಾಶ್ ಅವರ ಮುಂದಾಳತ್ವದಲ್ಲಿ ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳು ಎಂದಿನಂತೆ ಉತ್ತಮವಾಗಿ ನಡೆಯುತ್ತಾ ಬಂದಿವೆ.

2019–20ನೇ ಸಾಲಿನ 74ನೇ ವಾರ್ಷಿಕ ಕ್ರೀಡಾಕೂಟದ ಉದ್ಘಾಟನೆಯನ್ನು ಶ್ರೀ ಬಸವರಾಜ್ ಆರ್. ಸೋಮಣ್ಣನವರ್ ಕೆ. ಎ. ಎಸ್. ಸಹಾಯಕ ನಿರ್ದೇಶಕರು. ಪದವಿಪೂರ್ವ ಶಿಕ್ಷಣ ಇಲಾಖೆ. ಬೆಂಗಳೂರು, ಇವರು ದಿನಾಂಕ 03.12.2019 ರಂದು ನೆರವೇರಿಸಿದರು. ಸಂಸ್ಥೆಯ ಅಧ್ಯಕ್ಷರಾದ ಡಾ. ಎ. ಎಚ್. ರಾಮರಾವ್‌ರವರು ಅಧ್ಯಕ್ಷತೆ ವಹಿಸಿದ್ದರು. ಗೌರವ ಕಾರ್ಯದರ್ಶಿಗಳಾದ ಪ್ರೊ. ಎಸ್. ಎನ್. ನಾಗರಾಜ ರೆಡ್ಡಿಯವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ ಇವರು ಜಿಲ್ಲಾ ಮಟ್ಟದ ಅಂತರ ಕಾಲೇಜು ಸ್ಪರ್ಧೆಗಳಾದ ಹ್ಯಾಂಡ್‌ಬಾಲ್, ನೆಟ್‌ಬಾಲ್, ಷಟಲ್ ಬ್ಯಾಡ್ಮಿಂಟನ್ ಮತ್ತು ಟೆನ್ನಿಸ್ ಪಂದ್ಯಾವಳಿಗಳನ್ನು ನಮ್ಮ ಕಾಲೇಜಿನಲ್ಲಿ ಯಶಸ್ವಿಯಾಗಿ ನೆರವೇರಿಸಿಕೊಡಲಾಯಿತು.



ಶ್ರೀ ಬಸವರಾಜ್ ಆರ್. ಸೋಮಣ್ಣನವರ್ ರವರಿಂದ
ವಾರ್ಷಿಕ ಕ್ರೀಡಾಕೂಟದ ಉದ್ಘಾಟನೆ

### ಪದವಿಪೂರ್ವ ವಿದ್ಯಾರ್ಥಿಗಳ ಕ್ರೀಡಾ ಸಾಧನೆ

**ವಿವೇಕಾನಂದ**
ದ್ವಿತೀಯ ಪಿಯುಸಿ 'ಇ'
ರಾಷ್ಟ್ರಮಟ್ಟದ ಬಾಕ್ಸರ್

**ದಿವ್ಯಶ್ರೀ ನಂಜಪ್ಪ**
ಪ್ರಥಮ ಪಿಯುಸಿ 'ಡಿ'
ಅಂತರಾಷ್ಟ್ರೀಯ ಪುಟ್‌ಬಾಲ್ ಆಟಗಾರ್ತಿ

**ಭಾನುಪ್ರಕಾಶ್**
ದ್ವಿತೀಯ ಪಿಯುಸಿ 'ಇ'
ರಾಷ್ಟ್ರಮಟ್ಟದ
ಕರಾಟೆ ಚಾಂಪಿಯನ್

**ನಂದಿತ ವಿ.**
ಪ್ರಥಮ ಪಿಯುಸಿ 'ಸಿ'
ರಾಜ್ಯಮಟ್ಟದ ಥ್ರೋಬಾಲ್ ಆಟಗಾರ್ತಿ

### 2019-20ನೇ ಸಾಲಿನ ಕ್ರೀಡಾ ಚಾಂಪಿಯನ್‌ಗಳು



ನಿತಿನ್
ದ್ವಿತೀಯ ಪಿಯುಸಿ 'ಎಫ್'

ಶಶಿಕುಮಾರ್
ದ್ವಿತೀಯ ಪಿಯುಸಿ 'ಇ'

ದರ್ಶನ್
ದ್ವಿತೀಯ ಪಿಯುಸಿ 'ಇ'



ವಲರ್‌ಮತಿ
ದ್ವಿತೀಯ ಪಿಯುಸಿ 'ಡಿ'



74ನೇ ಕ್ರೀಡಾಕೂಟದಲ್ಲಿ ಚಾಂಪಿಯನ್ ಆದ ತರಗತಿ ದ್ವಿತೀಯ ಪಿಯುಸಿ 'ಇ' ವಿಭಾಗ





ಈ ಬಾರಿ ವಿಶೇಷವಾಗಿ ಕ್ರೀಡಾ ವಿಭಾಗದಿಂದ ಕಾಲೇಜಿನ ಎಲ್ಲಾ ಸಿಬ್ಬಂದಿ ವರ್ಗದವರಿಗೆ 'ಡಾ. ಎಚ್ಚೆನ್ ಕಪ್' ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಆಯೋಜಿಸಿದ್ದು ಶ್ಲಾಘನೀಯ.

**ಸಿಂಗಲ್ಸ್**

| | |
|---|---|
| **ರವಿಕುಮಾರ್ ಕೆ. ಬಿ.** (ವಿನ್ನರ್) | **ರವಿ ಐ. ಎಂ.** (ರನ್ನರ್) |
| **ಪಲ್ಲವಿ ಶ್ರೀ ಎಂ. ಪಿ.** (ವಿನ್ನರ್) | **ಉಮಾ ಎಂ ಎಸ್.** ರನ್ನರ್ |

**ಡಬಲ್ಸ್**



**ರವಿ ಐ. ಎಂ. ಮತ್ತು ರವಿಕುಮಾರ್ ಕೆ. ಬಿ. (ವಿನ್ನರ್ಸ್)**



**ಲಲಿತ ಆರ್. ಮತ್ತು ಉಮಾ ಎಂ. ಎಸ್. (ವಿನ್ನರ್ಸ್)**



**ನಂದಿತ ವಿ. ಪ್ರಥಮ ಪಿಯುಸಿ 'ಸಿ', ರಾಜ್ಯಮಟ್ಟದ ಥ್ರೋಬಾಲ್ ಆಟಗಾರ್ತಿ**



**ಪ್ರೊ. ಬಿ. ಎಸ್. ವಿಶ್ವನಾಥ್ ಮತ್ತು ಡಾ. ನಿಂಗರಾಜು (ರನ್ನರ್ಸ್)**



**ಅಂಬಿಕಾ ಜೆ. ಎಸ್. ಮತ್ತು ಪಲ್ಲವಿ ಶ್ರೀ ಎಂ. ಪಿ. (ರನ್ನರ್ಸ್)**

## ಡಿ. ಸಿ. ಕೃಷ್ಣಮೂರ್ತಿ


ಕಾಲೇಜಿನ ಕ್ರೀಡಾ ವಿಭಾಗದಲ್ಲಿ ಸಹಾಯಕರಾಗಿರುವ ಶ್ರೀ ಡಿ. ಸಿ. ಕೃಷ್ಣಮೂರ್ತಿಯವರು ಮಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ 10 ಕಿ. ಮೀ.



ಓಟದಲ್ಲಿ ಚಿನ್ನದ ಪದಕವನ್ನು, 5 ಕಿ. ಮೀ. ಓಟದಲ್ಲಿ ಬೆಳ್ಳಿ ಪದಕವನ್ನು ಗೆದ್ದಿದ್ದಾರೆ. ಹಾಗೆಯೇ ಲಾನ್ ಟೆನ್ನಿಸ್ ಸ್ಪರ್ಧೆಯಲ್ಲಿ ರನ್ನರ್ ಅಪ್, ಲಾನ್‌ಟೆನ್ನಿಸ್ ಡಬಲ್ಸ್‌ನಲ್ಲಿ ಪ್ರಥಮ ಸ್ಥಾನ ಪಡೆದು ಗುಜರಾತಿನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆ ಯಾಗಿದ್ದಾರೆ. ಇವರಿಗೆ ಅಭಿನಂದನೆಗಳು.



**ಕಾಲೇಜಿನ ಕ್ರಿಕೆಟ್ ತಂಡ**







ಥ್ರೋ ಬಾಲ್ ತಂಡ



ಗುರಿಯತ್ತ ಓಟದ ಸ್ಪರ್ಧೆಗಳು



'ಹಗ್ಗ ಜಗ್ಗಾಟ' ಸ್ಪರ್ಧೆಯಲ್ಲಿ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳೊಂದಿಗೆ ಅಧ್ಯಾಪಕರು



74ನೇ ಕ್ರೀಡಾಕೂಟದಲ್ಲಿ ಮುಖ್ಯ ಅತಿಥಿ ಶ್ರೀ ಬಸವರಾಜ್ ಸೋಮಣ್ಣನವರ್ ರವರ ಬ್ಯಾಟಿಂಗ್ ವೈಖರಿ





ಅಧ್ಯಾಪಕ ವೃಂದ



ಬೋಧಕೇತರ ವೃಂದ



ಕಾಲೇಜಿನ ಸಂಗೀತ ತಂಡ





# ಡಾ. ಎಚ್. ಎನ್. : ಒಂದು ವ್ಯಕ್ತಿ ಚಿತ್ರ

ಎಚ್. ನರಸಿಂಹಯ್ಯನವರು 6 ಜೂನ್ 1920ರಂದು ಕೋಲಾರ ಜಿಲ್ಲೆಯ ಗೌರೀಬಿದನೂರು ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಒಂದು ಬಡ, ಹಿಂದುಳಿದ ಕುಟುಂಬದಲ್ಲಿ ಹುಟ್ಟಿದರು. ತಂದೆ ಹನುಮಂತಪ್ಪ, ತಾಯಿ ವೆಂಕಟಮ್ಮ, ತಂಗಿ ಗಂಗಮ್ಮ ಈಗ ಅವರಾರೂ ಇಲ್ಲ.

ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಹೊಸೂರಿನಲ್ಲಿ ಮುಗಿಸಿ, 1935ರಲ್ಲಿ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿಗೆ ಸೇರಿದರು. ಭೌತಶಾಸ್ತ್ರದ ಬಿ.ಎಸ್.ಸಿ. (ಆನರ್ಸ್) ಮತ್ತು ಎಂ.ಎಸ್.ಸಿ., ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿದರು. ಎಲ್ಲಾ ಪರೀಕ್ಷೆಗಳಲ್ಲಿ ಉನ್ನತ (ಪ್ರಥಮ) ದರ್ಜೆಯಲ್ಲಿ ಉತ್ತೀರ್ಣರಾದರು.

1946ನೆಯ ಇಸವಿಯಲ್ಲಿ ಬೆಂಗಳೂರು ಬಸವನಗುಡಿ ಕಾಲೇಜಿನಲ್ಲಿ ಭೌತಶಾಸ್ತ್ರ ಅಧ್ಯಾಪಕ–ರಾದರು. ಅಲ್ಲಿಯೇ ಪ್ರಾಧ್ಯಾಪಕರಾಗಿ, ಆಮೇಲೆ ಹನ್ನೆರಡು ವರ್ಷಗಳು ಪ್ರಿನ್ಸಿಪಾಲರಾಗಿದ್ದರು. 1972 ರಿಂದ 1977 ರವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳು. ಅವರ ಕಾಲದಲ್ಲಿ ಹಲವು ಮಹತ್ತರ ಕಾರ್ಯಗಳ ಸಾಧನೆ. ಎಚ್. ಎನ್. ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕದ ಅಧ್ಯಕ್ಷರಾಗಿದ್ದರು.

ವಿದ್ಯಾರ್ಥಿ ದೆಸೆಯಲ್ಲಿ ಅವರು ವಿವಿಧ ಉಚಿತ ವಿದ್ಯಾರ್ಥಿ ನಿಲಯಗಳಲ್ಲಿದ್ದರು. ಅಧ್ಯಾಪಕರಾದ ಮೇಲೂ 1946ರಿಂದ ಕೊನೆಯತನಕ ನ್ಯಾಷನಲ್ ಕಾಲೇಜ್ ಹಾಸ್ಟಲೇ ಅವರ ಮನೆಯಾಗಿತ್ತು. ಇದೊಂದು ವಿಶಿಷ್ಟ ದಾಖಲೆ.

1942ನೆಯ ಇಸವಿಯಲ್ಲಿ, ಸೆಂಟ್ರಲ್ ಕಾಲೇಜಿನಲ್ಲಿ ಮೂರನೆಯ ಬಿ.ಎಸ್.ಸಿ. ಆನರ್ಸ್ ತರಗತಿಯಲ್ಲಿ ಓದುತ್ತಿದ್ದಾಗ ಗಾಂಧೀಜಿಯವರು ಮೊದಲು ಮಾಡಿದ 'ಕ್ವಿಟ್ ಇಂಡಿಯಾ' ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ವಿದ್ಯಾಭ್ಯಾಸಕ್ಕೆ ಎರಡು ವರ್ಷ ವಿದಾಯ. ಬೆಂಗಳೂರು, ಮೈಸೂರು ಮತ್ತು ಪುಣೆಯ ಯರವಾಡಾ ಜೈಲುವಾಸ.

ಅಮೇರಿಕಾದ ಓಹೈಓ ಸ್ಟೇಟ್ ವಿಶ್ವವಿದ್ಯಾಲಯ (Ohio State University) ದಲ್ಲಿ ಮೂರು ವರ್ಷ ಅಭ್ಯಾಸ ಮಾಡಿ ನ್ಯೂಕ್ಲಿಯರ್ ಫಿಸಿಕ್ಸ್‌ನಲ್ಲಿ 1960ರಲ್ಲಿ ಡಾಕ್ಟರೇಟ್ ಪದವಿ ಪಡೆದರು. ಅಲ್ಲಿಯ ಪರೀಕ್ಷೆಗಳಲ್ಲಿಯೂ ಉತ್ತಮಮಟ್ಟದ ಪ್ರಥಮ ಶ್ರೇಣಿ. ಏಳು ವರ್ಷಗಳನಂತರ ಅಮೆರಿಕಾದ ಸದರನ್ ಇಲ್ಲಿನಾಯ್ಸ್ ವಿಶ್ವವಿದ್ಯಾಲಯ (Southern Illinois University) ದಲ್ಲಿ ಒಂದು ವರ್ಷ ಕಾಲ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು.





ಇವರ ಇಡೀ ಜೀವನ ಶಿಕ್ಷಣಕ್ಕೆ ಮತ್ತು ನಾಲ್ಕು ನ್ಯಾಷನಲ್ ಕಾಲೇಜು, ಐದು ನ್ಯಾಷನಲ್ ಹೈಸ್ಕೂಲು ಮತ್ತು ಎರಡು ನ್ಯಾಷನಲ್ ಪ್ರೈಮರಿ ಶಾಲೆಗಳನ್ನೊಳಗೊಂಡ ನ್ಯಾಷನಲ್ ಎಜುಕೇಷನ್ ಸೊಸೈಟಿಗೆ ಮೀಸಲಾಗಿತ್ತು. ಅವರ ಸರ್ವಸ್ವವನ್ನು ಈ ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಅಲ್ಲದೆ ಈ ಸಂಸ್ಥೆಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಸಾರ್ವಜನಿಕರಿಂದ ಸಂಗ್ರಹ ಮಾಡಿದ್ದಾರೆ. ಈ ಸಂಸ್ಥೆಗಳ ಪೈಕಿ ಆರೇಳು ಸಂಸ್ಥೆಗಳು, ಇವರ ವಿಶೇಷ ಪ್ರಯತ್ನದ ಫಲವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಾಪಿಸಲ್ಪಟ್ಟಿವೆ.

ವಿಜ್ಞಾನದಲ್ಲಿ, ವೈಜ್ಞಾನಿಕ ಮನೋಭಾವದಲ್ಲಿ ಅವರಿಗೆ ಅಚಲವಾದ ನಂಬಿಕೆಯಿತ್ತು. ಮೌಢ್ಯದ ವಿರುದ್ಧ ಸತತ ಹೋರಾಟ. ಮೂವತ್ತು ವರ್ಷಗಳ ಹಿಂದೆ ಬೆಂಗಳೂರು ಸೈನ್ಸ್ ಫೋರಂ (Bangalore Science Forum) ಎಂಬ ವಿಜ್ಞಾನ ವೇದಿಕೆಯ ಸ್ಥಾಪಕ ಅಧ್ಯಕ್ಷರು. ಸಂಗೀತ, ನಾಟಕ, ನೃತ್ಯ ಮುಂತಾದ ಲಲಿತಕಲೆಗಳಿಗೆ ಮೊದಲಿನಿಂದಲೂ ಪ್ರೋತ್ಸಾಹ ನೀಡುತ್ತಿದ್ದರು. ಜಯನಗರದ ನ್ಯಾಷನಲ್ ಕಾಲೇಜಿನಲ್ಲಿರುವ ಲಲಿತ ಕಲಾ ಪರಿಷತ್ತಿನ ಸ್ಥಾಪಕ ಅಧ್ಯಕ್ಷರಾಗಿದ್ದರು. ಅವರ ವಿಶಿಷ್ಟ ಸೇವೆಗಾಗಿ 'ರಾಜ್ಯ ಪ್ರಶಸ್ತಿ', ಭಾರತ ಸರ್ಕಾರದ 'ಪದ್ಮ ಭೂಷಣ', ಗುಲ್ಬರ್ಗಾ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿಗಳು ದೊರೆತಿದ್ದವು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ 'ತಾಮ್ರ ಪತ್ರ' ಪ್ರಶಸ್ತಿ. ಕರ್ನಾಟಕ ರಾಜ್ಯ ನಾಟಕ ಅಕಾಡೆಮಿಯ 'ಫೆಲೋ'. ಅತೀಂದ್ರಿಯ ಘಟನೆಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸಲು ಅಮೆರಿಕಾದಲ್ಲಿ ಸ್ಥಾಪಿಸಲ್ಪಟ್ಟಿರುವ ಅಂತರ ರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಗಳು, ಸಮಾಜ ಮತ್ತು ಮನಃಶಾಸ್ತ್ರ ವಿಜ್ಞಾನಿಗಳು, ನೊಬೆಲ್ ಪಾರಿತೋಷಕ ವಿಜೇತರು 'ಫೆಲೋ'ಗಳಾಗಿರುವ 'ಕಮಿಟಿ ಫಾರ್ ದಿ ಸೈಂಟಿಫಿಕ್ ಇನ್‌ವೆಸ್ಟಿಗೇಷನ್ ಆಫ್ ದಿ ಕ್ಲೈಮ್ಸ್ ಆಫ್ ದಿ ಪ್ಯಾರಾ ನಾರ್ಮಲ್' (Committee for the Scientific Investigation of the claims of the Paranormal) ಸಂಸ್ಥೆಯ ಭಾರತದ ಏಕೈಕ 'ಫೆಲೋ' ಆಗಿದ್ದರು. ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನಲ್ಲಿ ಶಿಕ್ಷಣ ಮತ್ತು ವಿಜ್ಞಾನವನ್ನು ಪ್ರತಿನಿಧಿಸುವ ನಾಮಕರಣ ಸದಸ್ಯರಾಗಿದ್ದರು.


ಉತ್ತಮ ಅಧ್ಯಾಪಕ, ದಕ್ಷ ಆಡಳಿತಗಾರ. ಮೇಲ್ಮಟ್ಟದ ಹಾಸ್ಯಪ್ರಜ್ಞೆ, ಮಾನಸಿಕ, ದೈಹಿಕ ನೋವುಗಳ ಮಧ್ಯೆಯೂ ಅವರ ಹಾಸ್ಯ ಮನೋಭಾವವನ್ನು ಕಾಣಬಹುದು. ಸ್ನೇಹಮಯಿ, ಮಾನವತಾವಾದಿ, ವಿಚಾರವಾದಿ, ಒಳ್ಳೆಯ ಅಭ್ಯಾಸಗಳಿಂದ ಕೂಡಿದ ಸ್ವಚ್ಛ, ಸರಳ ಸಂಯಮದ ಜೀವನ, ತೆರೆದ ಮನದಷ್ಟೇ ತೆರೆದ ಜೀವನವಾಗಿತ್ತು. ಅದಮ್ಯ ಆತ್ಮವಿಶ್ವಾಸ. ಜೀವನಪರ್ಯಂತ ಹೋರಾಟ, ಕರ್ಮಯೋಗಿ, ಜೀವನದ ಕೊನೆಯವರೆಗೂ ನಿರಂತರ ದುಡಿಮೆ. ರಾಷ್ಟ್ರೀಯವಾದಿ, ಖಾದಿದಾರಿ, ಪಟ್ಟುಹಿಡಿದು ಕಾರ್ಯ ಸಾಧಿಸುವ ಮನೋಭಾವ, ದೃಢ ಮನಸ್ಸು.

ಅನಾಥ ವಿದ್ಯಾರ್ಥಿಯಾಗಿ ಹಳ್ಳಿಯಿಂದ ಬಂದು ಯಾವ ಜಾತೀಯ, ರಾಜಕೀಯ ಬೆಂಬಲವಿಲ್ಲದೆ ಉನ್ನತ ಸ್ಥಾನಗಳನ್ನು ಗಳಿಸಿ ಐವತ್ತೇಳು ವರ್ಷಗಳ ಹಿಂದೆ ಯಾವ ಶಾಲೆಯಲ್ಲಿ ಓದಿದರೋ, ತದನಂತರ ಯಾವ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರೋ ಅದೇ ಶಾಲಾ ಕಾಲೇಜುಗಳ ಆಡಳಿತ ಮಂಡಳಿಯಾದ ಪ್ರತಿಷ್ಠಿತ ನ್ಯಾಷನಲ್ ಎಜುಕೇಷನ್ ಸೊಸೈಟಿಗೆ ಅಧ್ಯಕ್ಷರಾಗಿದ್ದುದು ಒಂದು ಅಪೂರ್ವ ಸಾಧನೆ.

(ತೆರೆದ ಮನ ಪುಸ್ತಕದಿಂದ)

## ಡಾ. ಎಚ್. ಎನ್. ರವರ ಆತ್ಮ ಕಥನ 'ಹೋರಾಟದ ಹಾದಿ' ಪುಸ್ತಕದಲ್ಲಿ ರಾಷ್ಟ್ರಕವಿ ಡಾ. ಜಿ. ಎಸ್. ಶಿವರುದ್ರಪ್ಪನವರು ಬರೆದ ಮುನ್ನುಡಿಯ ಆಯ್ದಭಾಗ.







ವೈಚಾರಿಕತೆ, ಮಾನವಕೇಂದ್ರಿತ ಕಾಳಜಿಗಳನ್ನುಳ್ಳ ಸಾಮಾಜಿಕ ಪ್ರಜ್ಞೆ, ವಿನೋದಪರತೆ ಮತ್ತು ಅಚಲವಾದ ಆತ್ಮವಿಶ್ವಾಸ– ಈ ಕೆಲವು ಲಕ್ಷಣಗಳಿಂದ ಸಮನ್ವಿತರಾದ ಡಾ. ಎಚ್. ನರಸಿಂಹಯ್ಯ ನವರು, ಶೈಕ್ಷಣಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ವಿಶಿಷ್ಟವಾದ ಸಾಧನೆಗಳನ್ನು ಮಾಡಿದ ಕೆಲವೇ ಕೆಲವರಲ್ಲಿ, ತೀರಾ ಮುಖ್ಯರಾದವರು.

ಮೂಲತಃ ನರಸಿಂಹಯ್ಯನವರು ವಿಚಾರವಾದಿಗಳು. ಈ ವೈಚಾರಿಕ ಮನೋಧರ್ಮ, ಅವರಿವರನ್ನು ನೋಡಿಯಾಗಲೀ ಅಥವಾ ಕಲಿಕೆಯಿಂದಾಗಲೀ ಬಂದದ್ದಲ್ಲ. ಹೊಸೂರಿನಂಥ, ಕುಗ್ರಾಮ ಪರಿಸರದಿಂದ ಬಂದ ನರಸಿಂಹಯ್ಯನವರಿಗೆ ಇದು ಜನ್ಮಜಾತವಾಗಿ ಬಂದದ್ದು ಎನ್ನುವ ಸಂಗತಿ ಬೆರಗುಗೊಳಿಸುವಂಥದ್ದು.

ಕೇವಲ ಯೋಚನೆ ಮಾಡುವುದು, ಪ್ರಶ್ನೆ ಮಾಡುವುದು ಇಷ್ಟೇ ವೈಚಾರಿಕತೆ ಅಲ್ಲ. ಹಾಗೆ ಯೋಚನೆ ಮಾಡುವುದರ ಪರಿಣಾಮವಾಗಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಇನ್ನೂ ಮುಖ್ಯ. ಹಾಗೆಯೇ ತಾನು ತೆಗೆದುಕೊಂಡ ನಿರ್ಧಾರಗಳಿಗೆ ತಾನು ಬದ್ಧನಾಗುವುದಿದೆಯಲ್ಲ ಅದು ತೀರಾ ಮಹತ್ವದು.

ಡಾ. ನರಸಿಂಹಯ್ಯನವರ ವೈಚಾರಿಕ ಪ್ರಜ್ಞೆ ಪ್ರಯೋಗಶೀಲವಾಗಿ ವಿಸ್ತರಿಸಿಕೊಳ್ಳುತ್ತ, ತನ್ನ ಸುತ್ತಣ ಬದುಕು ಈಗ ಇರುವುದಕ್ಕಿಂತ ಸುಂದರವಾಗಿ ಹಾಗೂ ಚಿಂತನಪರವಾಗಿ ರೂಪುಗೊಳ್ಳುವುದು ಹೇಗೆ ಎಂಬ ಕಾಳಜಿಗಳಿಂದ ಬದ್ಧವಾಗಿದೆ. ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವವನ್ನು, ಸಮಾಜ ಸೇವಾಕಾಂಕ್ಷೆಯನ್ನೂ ಮತ್ತು ಅಂತಃ ಸಾಕ್ಷಿಗೆ ಅನುಗುಣವಾಗಿ ವರ್ತಿಸುವುದು ಹೇಗೆ ಎಂಬುದನ್ನೂ ರೂಢಿಸಲು ಅವರು ನಡೆಯಿಸಿದ ಪ್ರಯತ್ನಗಳು ಈ ಆತ್ಮಕಥನದಲ್ಲಿ ವಿವರವಾಗಿ ದಾಖಲಾಗಿವೆ. ಮೊಟ್ಟಮೊದಲ ಬಾರಿಗೆ ಅವರು ಉಸ್ತುವಾರಿ (Invigilation) ಇಲ್ಲದೆ ಪರೀಕ್ಷೆಗಳನ್ನು ನಡೆಯಿಸಿದ ಕ್ರಮ ಶಿಕ್ಷಣ ಕ್ಷೇತ್ರದಲ್ಲಿಯೇ ಅಭೂತಪೂರ್ವವಾದದ್ದು (ಪು.233–235)

ಡಾ. ನರಸಿಂಹಯ್ಯನವರಿಗೆ ಅಖಿಲ ಭಾರತೀಯ ಖ್ಯಾತಿಯನ್ನು ತಂದುಕೊಟ್ಟ ಘಟನೆ ಎಂದರೆ ಅವರು ಪವಾಡ ಪುರುಷರಾದ ಸತ್ಯ ಸಾಯಿ ಬಾಬಾ ಅವರೊಂದಿಗೆ ಮುಖಾ–ಮುಖಿಯಾಗಿ ನಿಂತು, ಅವರ ಪವಾಡಗಳ ಮೌಲಿಕತೆಯನ್ನು ಪ್ರಶ್ನಿಸಿದ್ದು. ಸಾಯಿಬಾಬಾ ಮತ್ತವರ ಶಾಖೋಪಶಾಖೆಗಳ ಪವಾಡಗಳ ಪೊಳ್ಳುತನಗಳನ್ನು ಬಯಲಿಗೆಳೆಯುವ ಸಾಹಸವನ್ನು ಕೈಗೊಂಡರು. "ವಾಸ್ತವವಾಗಿ ಇದು ಇಂಥ ಉದ್ದೇಶಕ್ಕಾಗಿ ಭಾರತದಲ್ಲಿ ಮತ್ತು ಪ್ರಾಯಶಃ ವಿಶ್ವದಲ್ಲಯೆ ವಿಶ್ವವಿದ್ಯಾಲಯದಿಂದ ಅಥವಾ ಯಾವುದೇ ಅಧಿಕಾರ ಘಟಕದಿಂದ ರಚಿತವಾದ ಪ್ರಪ್ರಥಮ ಸಮಿತಿಯಾಗಿತ್ತು.





# ನನ್ನ ಮಾತು

ಈ ನನ್ನ ಹೋರಾಟಗಳು ಮತ್ತು ನನ್ನ ಬೆಳವಣಿಗೆ ಸಹಜವಾಗಿಯೇ ಹಲವರಿಗೆ ಅಸೂಯೆ, ಅತೃಪ್ತಿ ಹುಟ್ಟಿಸಿರುವುದು ಆಶ್ಚರ್ಯವೇನೂ ಅಲ್ಲ. ನಾನೇನೂ ಅಜಾತ ಶತ್ರುವಲ್ಲ. ಯಾರೂ ಅಜಾತ ಶತ್ರುವಾಗಲು ಸಾಧ್ಯವೂ ಇಲ್ಲ. ನಾನು ದಪ್ಪ ಚರ್ಮದವನಲ್ಲ, ಸೂಕ್ಷ್ಮ ಮನಸ್ಸಿನವನು.ಈ ಸ್ವಭಾವದಿಂದ ನಾನು ಸಾಕಷ್ಟು ಮಾನಸಿಕ ನೋವನ್ನು ಅನುಭವಿಸಿದ್ದೇನೆ. ಈ ಮಾನಸಿಕ ನೋವು ದೇಹದ ಮೇಲೂ ಪರಿಣಾಮ ಬೀರಿದೆ.ನಾನು ನೋವನ್ನು ನುಂಗಿಕೊಂಡು ಬಂದಿದ್ದೇನೆ. ನಗುವನ್ನು ಹಂಚಿಕೊಂಡು ಬಂದಿದ್ದೇನೆ.

60 ವರ್ಷಗಳ ಹಿಂದೆ ಹಳ್ಳಿಯಿಂದ ಬಂದ ಒಬ್ಬ 'ಅನಾಥ' ಬಾಲಕ ನ್ಯಾಷನಲ್ ಎಜುಕೇಷನ್ ಸೊಸೈಟಿಯಂತಹ ಪ್ರತಿಷ್ಠಿತ ಸಂಸ್ಥೆಗೆ ಅಧ್ಯಕ್ಷನಾಗಿರುವುದು ಒಂದು ಮಹತ್ವದ ಸಾಧನೆ ಎಂದು ಭಾವಿಸಿದ್ದೇನೆ. ನಮ್ಮ ಶಿಕ್ಷಣ ಸಂಸ್ಥೆಗಳೊಂದಿಗೇ ನಾನೂ ಬೆಳೆದಿದ್ದೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಶಾಲಾ ಕಾಲೇಜುಗಳನ್ನು ಸ್ಥಾಪಿಸಲು ನನ್ನ ಕೊಡುಗೆ ಸಾಕಷ್ಟಿದೆ ಎನ್ನುವುದು ನನಗೆ ಹೆಚ್ಚಿನ ತೃಪ್ತಿ, ಸಮಾಧಾನವನ್ನು ಕೊಟ್ಟಿದೆ. ನಾನು ಬೆಂಗಳೂರಿನಲ್ಲಿಯೇ 60 ವರ್ಷಗಳಿಂದ ಇದ್ದರೂ, ನಾನು ಹುಟ್ಟಿದ ಊರಿನಲ್ಲಿ ನನಗೆ ಯಾವ ಸಂಬಂಧಿಕರೂ ಇಲ್ಲದೇ ಇದ್ದರೂ ಆ ನನ್ನ ಊರು ನನಗೆ ತುಂಬಾ ಪ್ರಿಯ. ನನ್ನ ಜೀವನದಲ್ಲಿ ಎಷ್ಟೇ ಕಷ್ಟ–ಕಾರ್ಪಣ್ಯಗಳನ್ನು, ನೋವುಗಳನ್ನು ಅನುಭ–ವಿಸಿದ್ದರೂ ನಾನು ಎಂದೂ ನಿರಾಶಾವಾದಿ–ಯಾಗಲಿಲ್ಲ, ಸಿನಿಕನಾಗಲಿಲ್ಲ. ನಾನು ಸದಾ ಆಶಾವಾದಿ.ಅದೇ ಮನೋಭಾವದಿಂದ ನನ್ನ ಇಡೀ ಜೀವನವನ್ನು ಅರ್ಥಪೂರ್ಣವಾಗಿಯೇ ಕಳೆದಿದ್ದೇನೆ.

(ಹೋರಾಟದ ಹಾದಿ ಪುಸ್ತಕದಿಂದ)

'ಭಾರತ ಮಾತಾಕೀ ಜೈ' ಎಂಬ ಜಯಕಾರ ಸ್ವಾತಂತ್ರ್ಯ ಪೂರ್ವ ದಿನಗಳಲ್ಲಿ ತುಂಬಿದ ಕಂಠದಿಂದ ಅನುರಣಿತವಾಗುತ್ತಿತ್ತು. ಈಗ ಈ ಮಾತು ಪಡೆದುಕೊಳ್ಳುವ ಪ್ರತಿಕ್ರಿಯೆ ದುರ್ಬಲವಾದದ್ದು, ಅದರ ಬದಲು ಪ್ರಾದೇಶಿಕ ಭಾವನೆಯ ಸಂಕುಚಿತ ಧೋರಣೆಗಳು ಕಂಡು ಬರುತ್ತವೆ. ಉಚಿತವಾಗಿ ಅವು ಕಂಡು ಬಂದರೆ ತಪ್ಪೇನೂ ಇಲ್ಲ. ಆದರೆ ಅವು ತಮ್ಮ ಮಿತಿಯನ್ನು ಮೀರಿ 'ಭಾರತ ಮಾತಾಕೀ ಜೈ' ಎಂಬ ಮನೋಭಾವವನ್ನು ಅತಿಕ್ರಮಿಸಿದರೆ ಅಪಾಯಕಾರಿ ಆಗುತ್ತದೆ.

ಸ್ವಾತಂತ್ರ್ಯ ನಂತರ ನಮ್ಮದೇಶದ ಪ್ರಗತಿ ಕೆಲವಾರು ಕ್ಷೇತ್ರಗಳಲ್ಲಿ ಮೆಚ್ಚಬಹುದಾಗಿದ್ದರೂ ನಿರೀಕ್ಷೆಗೆ ತಕ್ಕಂತೆ ಆಗಿಲ್ಲ. ಸ್ವಾತಂತ್ರ್ಯದ ನಂತರಕಂಡು ಬರುವ ನೈತಿಕ ಮೌಲ್ಯಗಳ ಅಧಃಪತನ ನಮ್ಮ ದೇಶದ ದುರಂತ. ಇದು ಸಾಮಾನ್ಯ ಜನರಿಗಿಂತ ಹೆಚ್ಚಾಗಿ ನಾಯಕರಲ್ಲಿ ಕಂಡು ಬರುತ್ತಿದೆ. ಸ್ವಾತಂತ್ರ್ಯ ಚಳವಳಿಯ ನಿಸ್ವಾರ್ಥ ತ್ಯಾಗಶೀಲತೆಯನ್ನು ಈಗ ಲಾಭಕ್ಕಾಗಿ ದುರುಪಯೋಗ ಗೊಳಿಸುತ್ತಿದ್ದಾರೆ. ಸಮಯ ಸಾಧಕರು, ಇವರ ಜೊತೆಯಲ್ಲಿ ಸೇರಿಕೊಂಡು ಪರಿಸ್ಥಿಯನ್ನು ಮತ್ತಷ್ಟು ಹದಗೆಡಿಸಿದ್ದಾರೆ.

(ತೆರೆದ ಮನ ಪುಸ್ತಕದಿಂದ)





**ನನ್ನ ಜೀವನದ ಮಹತ್ತಾದ ಘಟನೆಯನ್ನು ನಾನು ಸದಾ ನೆನಸಿಕೊಳ್ಳಬೇಕು ಅನ್ನುವ ಉದ್ದೇಶದಿಂದಲೋ ಏನೋ 'ಹಿಂದೂ ಪತ್ರಿಕೆ'ಅದನ್ನು ಫೋಟೋ ತೆಗೆದುಕೊಂಡು ಮಾರನೆಯ ದಿನದ ಸಂಚಿಕೆಯಲ್ಲಿ ಪ್ರಕಟಿಸಿತು. ನನ್ನ ಒಬ್ಬ ಸಹಪಾಠಿ ಪತ್ರಿಕೆಯಿಂದ ಅದನ್ನು ಕತ್ತರಿಸಿಕೊಂಡು ಬಂದು ನನಗೆ ತರಗತಿಯಲ್ಲಿ ಕೊಟ್ಟನು. ಆತನು ಅದನ್ನು ಕೊಡದಿದ್ದರೆ ನನಗೆ ಆ ಅಪೂರ್ವ ಘಟನೆ ಮರತೇ ಹೋಗುತ್ತಿತ್ತು.ಆ ಫೋಟೋವನ್ನು ಕೆಲವು ತಿಂಗಳು ಕಾಪಾಡಿ ಇಟ್ಟುಕೊಂಡಿದ್ದೆ. ಆಮೇಲೆ ಅದು ಕಳೆದು ಹೋಯಿತು. ಮುಂದೆ ನಾನು ಸ್ವಾತಂತ್ರ್ಯ ಚಳವಳಿ (ಕ್ವಿಟ್ ಇಂಡಿಯಾ)ಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿ ಬಂದ ಮೇಲೆ ಆ ಚಿತ್ರದ ಪ್ರಾಮುಖ್ಯತೆ ಚೆನ್ನಾಗಿ ಗೊತ್ತಾಯಿತು. ಏನಾದರೂ ಮಾಡಿ'ಹಿಂದೂ' ಪತ್ರಿಕೆಯವರಿಂದ ಅದರ ಒಂದು ಪ್ರತಿಯನ್ನು ಸಂಪಾದಿಸಬೇಕೆಂದು ಯೋಚಿಸಿದೆ. ನ್ಯಾಷನಲ್ ಹೈಸ್ಕೂಲ್ ಪ್ರಕಟಿಸುತ್ತಿದ್ದ ದೇಶೀಯ ವಿದ್ಯಾಶಾಲಾ ಪತ್ರಿಕೆಯ (1963ರಲ್ಲಿ ಪ್ರಕಟವಾದ) ಸಹಾಯದಿಂದ ನಾವು ಗಾಂಧೀಜಿಯವರನ್ನು ಭೇಟಿ ಮಾಡಿದ ತಾರೀಖನ್ನು ತಿಳಿದುಕೊಂಡೆ. ಮದ್ರಾಸಿನಲ್ಲಿದ್ದ 'ಹಿಂದೂ' ಪತ್ರಿಕೆಯ ಸಂಪಾದಕರಿಗೆ ತಾರೀಖು ಮತ್ತು ಸೂಕ್ತ ವಿವರಗಳನ್ನು ಕೊಟ್ಟು ಆದರ ಒಂದು ಪ್ರತಿಯನ್ನು ಸಾಧ್ಯವಾದರೆ ಕಳುಹಿಸಬೇಕೆಂದು ಕಾಗದ ಬರೆದೆ. ಅದಾದ ಸುಮಾರು 8–10 ದಿನಗಳಲ್ಲಿ ನನಗೆ ಅಲ್ಲಿಂದ ಆ ಚಿತ್ರದ ಒಂದು ಪ್ರತಿ ಬಂದಾಗ ನನಗೆ ಹೆಚ್ಚಿನ ಸಂತೋಷವಾಯಿತು. ಇದು ಆದದ್ದು 1943ನೆಯ ಇಸವಿಯಲ್ಲಿ. ಆಗಿನಿಂದಲೂ ಆ ಅಮೂಲ್ಯವಾದ ಫೋಟೋವನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದೇನೆ.**

**(ಹೋರಾಟದ ಹಾದಿ ಪುಸ್ತಕದಿಂದ)**

# ಗಾಂಧೀಜಿ ಜತೆ ಎಚ್ಚೆನ್

ಎಚ್ಚೆನ್ ಸೀದಾ ಸ್ವರ್ಗಕ್ಕೆ ಹೋದರು. ಅಲ್ಲಿ ಗಾಂಧೀಜಿ ಅವರನ್ನು ಭೇಟಿ ಮಾಡಿದರು. ಗಾಂಧೀಜಿ ತಮ್ಮ ಬೊಚ್ಚು ಬಾಯಿಂದ ನಗೆ ಸೂಸಿ 'ಆಯೀಯೆ ಆಯೀಯೆ' ಎಂದು ಸ್ವಾಗತ ಕೋರಿ ಎಚ್ಚೆನ್ ತಲೆಯ ಮೇಲಿದ್ದ ಗಾಂಧೀ ಟೋಪಿಯನ್ನು ನೋಡಿ, 'ಇದು ಇನ್ನೂ ಭಾರತದಲ್ಲಿ ಸಿಗುತ್ತೇನು?' ಎಂದು ಅಚ್ಚರಿಯಿಂದ ಕೇಳಿದರು. ಅದಕ್ಕೆ ಉತ್ತರಿಸಲು ಎಚ್ಚೆನ್ ಸಿದ್ಧತೆ ಮಾಡಿಕೊಳ್ಳುತ್ತಿದಂತೆ ಅವರ ಶುದ್ಧ ಖಾದಿ ಉಡುಪನ್ನು ನೋಡಿದ ಗಾಂಧೀಜಿ 'ಇದನ್ನು ಇನ್ನೂ ಜನ ಹಾಕಿಕೊಳ್ಳುತ್ತಾರೆಯೆ?' ಎಂದು ಆಶ್ಚರ್ಯ ಪಟ್ಟರು.

'ನಿಮಗೆ ಇಲ್ಲಿಗೆ ಬರಲು ಇಷ್ಟ ಇರಲಿಲ್ಲ ಅಲ್ಲವೆ ಎಚ್ಚೆನ್?' ಗಾಂಧೀಜಿ ಕೇಳಿದಾಗ 'ಹೌದು ಗಾಂಧೀಜಿ. ಇನ್ನೂ ಕೆಲಸ ಬೇಕಾದಷ್ಟಿತ್ತು ಮಾಡಬೇಕಿದ್ದು' ಎಂದರು ಎಚ್ಚೆನ್ ತಮ್ಮ ಇನ್ನಿಂಗ್ಸ್ 85ಕ್ಕೇ ಮುಗಿದಿದ್ದಕ್ಕೆ ಬೇಸರಪಡುತ್ತಾ.

'ಇನ್ನೂ ಕೆಲಸ ಮಾಡುವುದಿದೆಯೆ? ಈ ವಯಸ್ಸಿನಲ್ಲೂ?' ಗಾಂಧೀಜಿ ಕೇಳಿದರು.

'ಹೌದು ಗಾಂಧೀಜಿ. ಹಲವಾರು ಯೋಜನೆಗಳಿದ್ದವು. ಅದಕ್ಕೆ ನಾನು ನನಗೆ ಸಾಯಲು ಇಷ್ಟವೇ ಇಲ್ಲ ಎಂದು ಪದೇ ಪದೇ ಹೇಳಿದ್ದೆ. ಆದರೆ ಸಾವು ನಮ್ಮ ಕೈಯಲಿಲ್ಲವಲ್ಲ' ಎಂದರು ಎಚ್ಚೆನ್.

'ಹೌದು ನಮ್ಮ ಕೈಯಲಿಲ್ಲ. ಭಗವಂತನ ಇಚ್ಛೆ' ಎಂದು ಗಾಂಧೀಜಿ ಹೇಳಿದಾಗ ಆ ಭಗವಂತ ಯಾರು? ಎಲ್ಲಿದ್ದಾನೆ? ಹೇಗಿದ್ದಾನೆ? ಅವನ ಕರ್ತವ್ಯಗಳೇನು? ಎಂದು ಕೇಳುವ ಆಸೆ ಎಚ್ಚೆನ್‌ಗಾಯಿತು. ಆದರೆ ಮಹಾತ್ಮನೊಡನೆ ಮೊದಲ ದಿನವೇ ಚರ್ಚೆ ಏಕೆಂದು ಮಾತು ಬೆಳೆಸಲಿಲ್ಲ.

'ಹೇಗಿತ್ತು ನಿಮ್ಮ 85 ವರ್ಷಗಳ ಜೀವನ?' ಗಾಂಧೀಜಿ ಕೇಳಿದರು.

'ಅದೊಂದು ಪವಾಡ' ಎಂದು ಎಚ್ಚೆನ್ ಉತ್ತರಿಸಿದಾಗ ಗಾಂಧೀಜಿಗೆ ಅಚ್ಚರಿ.

'ಪವಾಡ?'

'ಹೌದು ಗಾಂಧೀಜಿ. ಎಲ್ಲೋ ಕುಗ್ರಾಮದಲ್ಲಿ ಹುಟ್ಟಿದ ನಾನು ಜಾತಿ, ಗಾಡ್‌ಫಾದರ್, ವಶೀಲಿ ಮುಂತಾದ ಪ್ರಭಾವಗಳಿಲ್ಲದೆ ಮೇಲೆ ಬಂದು, ಮುಂದೆ ಬಂದು, ಕೊನೆವರೆಗೂ ಹೆಸರು ಕೆಡಿಸಿಕೊಳ್ಳದೆ, ಆಸ್ತಿ ಮಾಡಿಕೊಳ್ಳದೆ ಇನ್ನಿಂಗ್ಸ್ ಮುಗಿಸಿದ್ದು ನನಗೆ ಪವಾಡವಾಗಿಯೇ ತೋರುತ್ತಿದೆ ಗಾಂಧೀಜಿ. ಇದನ್ನು ನಾನು 'ಹೋರಾಟದ ಹಾದಿ'ಯಲ್ಲಿ ವಿವರಿಸಿದ್ದೇನೆ'.

'ಅಂದರೆ ಆತ್ಮಚರಿತ್ರೆ?'

'ಹೌದು ಗಾಂಧೀಜಿ. ನಿಮ್ಮ 'ಸತ್ಯಾನ್ವೇಷಣೆ'ಯಂತೆ ನನ್ನದು 'ಹೋರಾಟದ ಹಾದಿ'. ಕೆಲಸದಲ್ಲೇ ಮಗ್ನನಾಗಿದ್ದೆ' ಎಂದು ತಮ್ಮ 85 ವರ್ಷಗಳತ್ತ ನೋಟ ಹರಿಸಿದರು.

## ಆನಂದ

'ಕೆಲಸ. ನಾನೂ ಕಾಯಕವೇ ಕೈಲಾಸ ಎಂದು ಹೇಳಿದ್ದೆ' ಎಂದರು ಗಾಂಧೀಜಿ.

'ಆದರೆ ಗಾಂಧೀಜಿ, ಈಗ ಕೈಲಾಸವೇ ಕಾಯಕವಾಗಿದೆ. ಕ್ರಿಕೆಟ್ಟೇ ಆಟವಾಗಿದೆ. ವಿದ್ಯೆ ಎಂಬುದು ದಂಧೆಯಾಗಿದೆ, ರಾಜಕೀಯ ಅಪರಾಧೀಕರಣಗೊಂಡಿದೆ. ನೀವು ಕನಸು ಕಂಡ ರಾಮರಾಜ್ಯವೇ ಬೇರೆ. ಈಗ ರೂಪುಗೊಳ್ಳುತ್ತಿರುವ ಭಾರತವೇ ಬೇರೆ' ಎಂದು ಎಚ್ಚೆನ್ ಅಳಲು ತೋಡಿಕೊಂಡರು.

'ನಿಜ. ಮೊನ್ನೆ ಎಂ ಎಸ್ ಇದೇ ಮಾತನ್ನು ನನಗೆ ಹೇಳಿದರು. ಈಗ ನಾನು ಭಾರತಕ್ಕೆ ಹೋದರೆ ಏನಾಗಬಹುದು?' ಗಾಂಧೀಜಿ ಕೇಳಿದರು.

'ನಿಮಗೆ ಕ್ಯಾರೆ ಎಂದು ಯಾರೂ ಹೇಳರು. ಆದರೆ ನಿಮ್ಮ ಮೂರ್ತಿಗೊಂದಿಷ್ಟು ಬೆಲೆ ಇದೆ' ಎಂದರು ಎಚ್ಚೆನ್.

'ಏನು ಹಾಗೆಂದರೆ?'

'ನಿಮ್ಮ ವಿಗ್ರಹದ ಮುಂದೆ ಒಂದಿಷ್ಟು ಪ್ರತಿಭಟನೆ ನಡೆಯುತ್ತೆ ಆಗಾಗ್ಗೆ. ಅದನ್ನು ಬಿಟ್ಟರೆ ನಿಮಗೇನೂ ವ್ಯಾಲ್ಯೂ ಇಲ್ಲ!

'ಹೋಗಲಿ ಬಿಡಿ ನಾನೇನು ಅಲ್ಲಿಗೆ ಹೋಗಲೂ ಸಾಧ್ಯವಿಲ್ಲ. ಸಂಭವಾಮಿ ಯುಗೇ ಯುಗೇ ಎಂದದ್ದು ಕೃಷ್ಣ ನಾನಲ್ಲ' ಎಂದರು ಗಾಂಧೀಜಿ ನಗುತ್ತಾ. ನಂತರ ಗಂಭೀರರಾಗಿ 'ನಮ್ಮ ಹಳ್ಳಿಗಳು ಹೇಗಿವೆ?'ಎಂದು ಕೇಳಿದರು.

'ಇಂಡಿಯಾ ಈಸ್ ನಾಟ್ ಲಿವಿಂಗ್ ಇನ್ ವಿಲೇಜಸ್' ಎಂದರು ಎಚ್ಚೆನ್.

'ಏಕೆ?'

'ಎಲ್ಲ ಹಳ್ಳಿಗರೂ ನಗರಕ್ಕೆ ಬರಲು ಹಾತೊರೆಯುತ್ತಾರೆ. ಹಳ್ಳಿಗಳು ಅಭಿವೃದ್ಧಿಯ ಹೆಸರಿನಲ್ಲಿ ನಗರಗಳಾಗಲು ಬಯಸುತ್ತವೆ'.

'ಮದ್ಯಪಾನ?'

'ಕೋಲಾ ಯಾಕೆ? ಬೀರ್ ಇಲ್ಲವೆ? ಎಂಬ ಜಾಹೀರಾತು ಎಲ್ಲೆಡೆ ಇದೆ' ಎಂದರು.

'ಇಷ್ಟೆಲ್ಲ ಆಗಿದ್ದರೂ ನೀವು ಈ ಖಾದಿಗೆ ಅಂಟಿಕೊಂಡಿದ್ದು ಹೇಗೆ?' ಎಂದು ಗಾಂಧೀಜಿ ಕುತೂಹಲ ವ್ಯಕ್ತಪಡಿಸಿದರು.

'ಅದನ್ನೂ ಪವಾಡದಲ್ಲಿ ಸೇರಿಸಬಹುದು' ಎಚ್ಚೆನ್ ನಗೆಯಾಡಿದರು.

'ಅಂದಹಾಗೆ ಇಲ್ಲಿ ಏನು ಮಾಡಬಯಸುವಿರಿ?' ಗಾಂಧೀಜಿ ಕೇಳಿದರು.

'ಖಾಲಿ ಜಾಗ ಸಿಗುತ್ತೇನು?' ಎಚ್ಚೆನ್ ಕೇಳಿದರು.

'ಖಾಲಿ ಜಾಗ? ಏಕೆ?'

'ಸ್ಕೂಲ್ ಶುರುಮಾಡೋಣ ಅಂತ. ನಾಳೆ ಅದು ಬೆಳೆಯುತ್ತೆ'.

'ಮೀಡಿಯಂ?' ಗಾಂಧೀಜಿ ಕೇಳಿದರು.

'ಮದರ್ ಟಂಗ್' ಎಂದು ತಮ್ಮ ಶಿಕ್ಷಣ ನೀತಿ ಪ್ರಕಟಿಸಿದರು.

'ಬನ್ನಿ' ಎಂದು ಗಾಂಧೀಜಿ ಎದ್ದರು ಊರುಗೋಲು ಸಮೇತ.

'ಎಲ್ಲಿಗೆ ಗಾಂಧೀಜಿ?'

'ಖಾಲಿ ಜಾಗ ಹುಡುಕೋದಕ್ಕೆ' ಎಂದು ಗಾಂಧೀಜಿ ಹೇಳಿ ದಂಡಿ ಯಾತ್ರೆಯಂತೆ ನಡೆದರು. ಎಚ್ಚೆನ್ ಅವರ ಜತೆ ಹೆಜ್ಜೆ ಹಾಕಿದರು.

ಪ್ರಜಾವಾಣಿ, 1–2–2005 •



ಜನ್ಮ ಶತಾಬ್ದಿ ವಿಶೇಷ



ಪದ್ಮಭೂಷಣ ಡಾ. ಎಚ್. ನರಸಿಂಹಯ್ಯ

# ಹೋರಾಟದ ಹಾದಿ


01


02


03


04


05




06


07


08


09


10


11


12


13



14


15


16



17


18






19



20


21


22


23



24

ಜನ್ಮ ಶತಾಬ್ದಿ ವಿಶೇಷ



ಪದ್ಮಭೂಷಣ ಡಾ. ಎಚ್. ನರಸಿಂಹಯ್ಯ

ಜನ್ಮ ಶತಾಬ್ದಿ ವಿಶೇಷ



# ಪದ್ಮಭೂಷಣ ಡಾ. ಎಚ್. ನರಸಿಂಹಯ್ಯ

















**1.** ಎಚ್.ಎನ್ ಓದಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ **2.** ಅಂದಿನ ಅವರ ಮನೆಯಲ್ಲಿ **3.** ರ‍್ಯಾಂಕ್ ವಿದ್ಯಾರ್ಥಿಗಳೊಂದಿಗೆ **4.** ಹೊಸೂರಿನ ಅಂದಿನ ಅವರ ಮನೆಯಲ್ಲಿ **5.** ನ್ಯಾಷನಲ್ ಹೈಸ್ಕೂಲ್ ವಿದ್ಯಾರ್ಥಿಯಾಗಿ ಗಾಂಧೀಜಿಯವರೊಂದಿಗೆ (1936) **6.** ಅಮೃತ ಮಹೋತ್ಸವ ಸಮಾರಂಭದಲ್ಲಿ ಶ್ರೀ. ಹೆಚ್. ಡಿ. ದೇವೆಗೌಡರ ಜೊತೆ **7.** ಬಾಗೆಪಲ್ಲಿ ನ್ಯಾಷನಲ್ ಕಾಲೇಜಿನಲ್ಲಿ **8.** ಅಂದಿನ ಮುಖ್ಯಮಂತ್ರಿ ಶ್ರೀ ವೀರೆಂದ್ರ ಪಾಟೀಲರೊಂದಿಗೆ **9.** ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿನಿಲಯ **10.** ಲಾಲ್ ಬಾಗ್‌ನಲ್ಲಿ ವಾಯು ವಿಹಾರ **11.** ಬಸವ–ನಗುಡಿ ನ್ಯಾಷನಲ್ ಕಾಲೇಜಿನ ಗ್ರಂಥಾಲಯ ವಿಭಾಗ **12.** ಅಂದಿನ ರಾಷ್ಟ್ರಪತಿ ಗ್ಯಾನಿ ಜೈಲ್‌ಸಿಂಗ್ ಅವರಿಂದ ಪದ್ಮಭೂಷಣ ಪ್ರಶಸ್ತಿ ಪ್ರಧಾನ **13.** ಸ್ವಾತಂತ್ರ್ಯ ದಿನಾಚರಣೆ **14.** ತಕಲಿಯಲ್ಲಿ ನೂಲು–ತ್ತಿರುವ ಎಚ್. ಎನ್. **15.** ಡಾ. ಎಚ್ಚೆನ್. ಸಬಾಂ–ಗಣದಲ್ಲಿ. **16.** ಅಮೇ–ರಿಕಾದಲ್ಲಿ ಪ್ರಾಧ್ಯಪಕ **17.** ಅಂದಿನ ಮುಖ್ಯಮಂತ್ರಿ ಶ್ರೀ. ರಾಮಕೃಷ್ಣ ಹೆಗಡೆಯುವರೊಂದಿಗೆ **18.** ಕಾಲೇಜಿನ ಅಂದಿನ ಮುಖ್ಯ ದ್ವಾರ **19.** ಕಾಲೇಜು ಅಂಗಳದಲ್ಲಿ **20.** ಡಾ. ಎಚ್ಚೆನ್ ಆತ್ಮಕಥನ 'ಹೋರಾಟದ ಹಾದಿ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ. **21.** ಅಂದಿನ ರಾಷ್ಟ್ರಪತಿಗಳಾದ ಶ್ರೀ ವಿ. ವಿ. ಗಿರಿಯವರೊಂದಿಗೆ. **22.** ಗಾಂಧೀ ಶತಮಾನೋತ್ಸವದ ದಿನ ಕಾಲೇಜು ವಿದ್ಯಾರ್ಥಿಗಳ ಬೃಹತ್ ಮೆರವಣಿಗೆ. **23.** ಅಂದಿನ ವಿದ್ಯಾಮಂತ್ರಿ ಶ್ರೀ ಕೆ.ವಿ. ಶಂಕರ ಗೌಡರಿಂದ ಗಾಂಧಿ ಅಧ್ಯಯನ ಕೇಂದ್ರದ ಉದ್ಘಾಟನೆ. **24.** ಜಯನಗರ ನ್ಯಾಷನಲ್ ಕಾಲೇಜಿನ ಕಟ್ಟಡಕ್ಕೆ ಗುದ್ದಲಿ ಪೂಜೆ. **25.** ಇನ್ಫೋಸಿಸ್ ಸಂಸ್ಥೆಯ ಶ್ರೀ ನಾರಾಯಣ ಮೂರ್ತಿ ಮತ್ತು ಶ್ರೀಮತಿ ಸುಧಾಮೂರ್ತಿಯವರೊಂದಿಗೆ **26.** ಅಂತರ ರಾಷ್ಟ್ರೀಯ ಕ್ರಿಕೆಟ್ ಪಟು ನ್ಯಾಷನಲ್ ಕಾಲೇಜು ವಿದ್ಯಾರ್ಥಿ ಬಿ.ಎಸ್. ಚಂದ್ರಶೇಖರ್‌ಗೆ ಸನ್ಮಾನ **27.** ಪ್ರಾಧ್ಯಾಪಕರಾಗಿ ಅಮೇರಿಕಾಕ್ಕೆ ಹೋಗುವಾಗ ಆತ್ಮೀಯ ಬೀಳ್ಕೊಡುಗೆ **28.** ಇಂಡಿಯಾ–ಪಾಕಿಸ್ತಾನ ಯುದ್ಧದಲ್ಲಿ ಹೋರಾಡಿದ ಕಾಲೇಜಿನ ಹಿರಿಯ ವಿದ್ಯಾರ್ಥಿ ಆಗ ನೌಕಾದಳದ ಲೆಫ್ಟಿನೆಂಟ್, ರೇರ್ ಅಡ್ಮಿರಲ್ ಎಸ್. ಸುಂದರ ರಾಜ್‌ರವರಿಗೆ ಸನ್ಮಾನ. **29.** ಆಸ್ಪತ್ರೆಯಲ್ಲಿ ಗಣ್ಯರು ಎಚ್. ಎನ್. ರವರ ಆರೋಗ್ಯ ವಿಚಾರಿಸುತ್ತಿರುವುದು. **30.** ದುಃಖ ತಪ್ತ ವಿದ್ಯಾರ್ಥಿನಿಯರು. **31.** ಎಚ್. ಎನ್. ಅಮರ ಧಾಮ **32.** ಗೌರಿಬಿದನೂರು ಸಮೀಪದ ಡಾ. ಎಚ್ಚೆನ್ ಸೈನ್ಸ್‌ಪಾರ್ಕ್‌ನಲ್ಲಿ ಸ್ಥಾಪಿಸಿರುವ ಪ್ರತಿಮೆ.





## ಬೆಂಗಳೂರು ವಿಜ್ಞಾನ ವೇದಿಕೆ

ಬೆಂಗಳೂರು ವಿಜ್ಞಾನ ವೇದಿಕೆ ಸ್ಥಾಪಿತವಾಗಿ ಇಂದಿಗೆ 57 ವರ್ಷ ತುಂಬಿದೆ ಪ್ರತಿ ವರ್ಷದಂತೆ ಈ ವರ್ಷವು ಕೆಳಕಂಡ ಕಾರ್ಯಕ್ರಮಗಳನ್ನು ನಡೆಸಿದೆ.

1. ಪ್ರತಿ ಬುಧವಾರ ವಿಜ್ಞಾನ ಉಪನ್ಯಾಸಗಳು 56 (ಒಟ್ಟು 2926)
2. ವಿಜ್ಞಾನ ಚಲನಚಿತ್ರಗಳು 14 (ಒಟ್ಟು 776)
3. 53ನೇ ವರ್ಷದ ಪದವಿ ವಿದ್ಯಾರ್ಥಿಗಳಿಗೆ ವಿಜ್ಞಾನ ಭಾಷಣ ಸ್ಪರ್ಧೆ
4. 54ನೇ ವರ್ಷದ ಪದವಿಪೂರ್ವ ವಿದ್ಯಾರ್ಥಿಗಳಿಗೆ ವಿಜ್ಞಾನ ಸ್ಪರ್ಧೆ

ಈ ವರ್ಷದ 42ನೇ ವಿಜ್ಞಾನೋತ್ಸವವನ್ನು Dr. A. S. Kiran Kumar, Former Chairman , Indian Space Research Organisation ಇವರು Astrosat a Space Science Mission ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡುವ ಮೂಲಕ ಉದ್ಘಾಟಿಸಿದರು. Dr. Vijay Raghavan, Dr. P. Balaram, Dr. G. Padmanaban, Dr. V. R. Lalithambika, Dr. S. Christopher, Dr. Vivek Jawali, Dr. M Maiya, Dr. P.Sadanandamaiya, Dr. Manimozhi Theodore ಇನ್ನು ಹಲವರು ವಿವಿಧ ವಿಷಯಗಳ ಮೇಲೆ ಉಪನ್ಯಾಸ ನೀಡಿದರು. ವಿಜ್ಞಾನೋತ್ಸವ ಸಮಾರೋಪವನ್ನು Dr. S. Sitharama



**ಡಾ. ಎ. ಎಸ್. ಕಿರಣ್ ಕುಮಾರ್ ರವರೊಂದಿಗೆ ಡಾ. ಎ. ಎಚ್. ರಾಮರಾವ್**

Iyengar, Distinguished Ryder Professor and Director Florida International University (U.S.A.) ಅವರು Cloud Computing and Data Center ಎಂಬ ವಿಷಯದ ಕುರಿತು ಉಪನ್ಯಾಸ ನೀಡುವ ಮೂಲಕ ನಡೆಸಿಕೊಟ್ಟರು.

ಈ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಲು ಬೆಂಗಳೂರು ವಿಜ್ಞಾನ ವೇದಿಕೆಯ ಅಧ್ಯಕ್ಷರಾದ ಡಾ॥ ಎ.ಎಚ್.ರಾಮರಾವ್, ಪದಾಧಿಕಾರಿಗಳು, ಹಾಗು ಸದಸ್ಯರುಗಳ ಪರಿಶ್ರಮವಿದೆ. ಎಲ್ಲರ ಸಹಕಾರ ಮತ್ತು ಪ್ರೋತ್ಸಾಹ ಪರಿಶ್ರಮದಿಂದ ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸಿ, ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಕಾರ್ಯಗತಗೊಳಿಸಲು ಬೆಂಗಳೂರು ವಿಜ್ಞಾನ ವೇದಿಕೆಯು ಆಶಿಸುತ್ತದೆ.

2019–20ನೇ ಸಾಲಿನಲ್ಲಿ ವಿಜ್ಞಾನ ವಿಷಯಗಳ ಬಗ್ಗೆ ನಡೆಸಿದ ಅಂತರಕಾಲೇಜು ಭಾಷಣ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಈ ಬಾರಿಯೂ ಪರ್ಯಾಯ ಪಾರಿತೋಷಕವನ್ನು ತಮ್ಮದಾಗಿಸಿಕೊಂಡು ಕಾಲೇಜಿಗೆ ಕೀರ್ತಿ ತಂದಿದ್ದಾರೆ ಈ ಎಲ್ಲಾ ವಿದ್ಯಾರ್ಥಿಗಳಿಗೂ ಅಭಿನಂದನೆಗಳು.




**ಅಂತರ ಕಾಲೇಜು ವಿಜ್ಞಾನ ಭಾಷಣ ಸ್ಪರ್ಧೆಯಲ್ಲಿ ಬಹುಮಾನ ಪಡೆದ ನಮ್ಮ ವಿದ್ಯಾರ್ಥಿಗಳು.**

| ಉತ್ತಮ ಶ್ರೇಣಿಯನ್ನು ಪಡೆದ ವಿದ್ಯಾರ್ಥಿಗಳು | | | |
|---|---|---|---|
| ಪ್ರಜ್ವಲ್ ಎಸ್. | ದ್ವಿತೀಯ ಪಿಯುಸಿ 'ಬಿ' | ಎಲೆಕ್ಟ್ರಾನಿಕ್ಸ್ | ಎ ಶ್ರೇಣಿ |
| ಗೌತಮ್ ಕೆ. | ದ್ವಿತೀಯ ಪಿಯುಸಿ 'ಸಿ' | ಭೌತಶಾಸ್ತ್ರ | ಎ ಶ್ರೇಣಿ |
| ವಿವೇಕ್ | ಪ್ರಥಮ ಪಿಯುಸಿ 'ಬಿ' | ಗಣಿತಶಾಸ್ತ್ರ | ಎ ಶ್ರೇಣಿ |
| ಸೂರ್ಯಸಾಥಿ | ದ್ವಿತೀಯ ಪಿಯುಸಿ 'ಎ' | ಮನೋವಿಜ್ಞಾನ | ಬಿ ಶ್ರೇಣಿ |
| ನಿತ್ಯ ಗದಗ್ | ದ್ವಿತೀಯ ಪಿಯುಸಿ 'ಸಿ' | ಜೀವವಿಜ್ಞಾನ | ಎ ಶ್ರೇಣಿ |
| ರಕ್ಷಿತ್ ಪಿ. | ಪ್ರಥಮ ಪಿಯುಸಿ 'ಸಿ' | ರಸಾಯನಶಾಸ್ತ್ರ | ಬಿ ಶ್ರೇಣಿ |
| ಝೈದ್ ಜಡ್ | ಪ್ರಥಮ ಪಿಯುಸಿ 'ಇ' | ಕಂಪ್ಯೂಟರ್‌ಸೈನ್ಸ್ | ಎ ಶ್ರೇಣಿ |



**'IYPT 2019' IISc ಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳಾದ ಶ್ರೀ ಎಂ. ಪಿ. ಜಗದೀಶ್ ಮತ್ತು ಶ್ರೀಮತಿ ಎ. ವಿ. ಪದ್ಮಲತಾ.**





## ಪ್ರತಿಭಾ ದಿನಾಚರಣೆ



ವಿದ್ಯಾರ್ಥಿಜೀವನದ ಮತ್ತೊಂದು ಪ್ರಮುಖ ಆಯಾಮವೇ ಪಠ್ಯೇತರ ಚಟುವಟಿಕೆ. ವಿದ್ಯಾರ್ಥಿ ಹಾಗೂ ಅಧ್ಯಾಪಕರ ನಡುವಿನ ಒಡನಾಟದ ಗಟ್ಟಿತನಕ್ಕೆ ಇದು ಪ್ರಮುಖವಾದ ನೆಲೆಯೆಂದರೆ ಅತಿಶಯೋಕ್ತಿಯೇನಲ್ಲ. ಪ್ರತಿ ವರ್ಷದಂತೆ ಪ್ರಸಕ್ತ ಸಾಲಿನಲ್ಲಿ ಪ್ರತಿಭಾದಿನಾಚರಣೆಯನ್ನು ಆಚರಿಸಲಾಯಿತು.

ಈ ಸಲದ ಪ್ರತಿಭಾ ದಿನಾಚರಣೆಯನ್ನು **'ನಾಡು ನುಡಿ'** ಎಂಬ ಶೀರ್ಷಿಕೆಯಡಿಯಲ್ಲಿ ಕನ್ನಡ ಮಯವಾಗಿಸಿದ್ದು ವಿಶೇಷವಾಗಿತ್ತು. ನಮ್ಮ ವಿದ್ಯಾರ್ಥಿಗಳ ಕನ್ನಡಾಭಿಮಾನವನ್ನು ಅಭಿವ್ಯಕ್ತಗೊಳಿಸಲು ಪ್ರತಿಭಾ ವೇದಿಕೆ **'ನಾಡು–ನುಡಿ'** ಯಡಿಯಲ್ಲಿ ಸಜ್ಜಾಗಿತ್ತು.

ಕನ್ನಡ ವರ್ಣಮಾಲೆಗಳಿಂದ ವೇದಿಕೆ ಅಲಂಕಾರಗೊಂಡಿದ್ದು ಉತ್ಸಾಹಕ್ಕೆ ಮತ್ತಷ್ಟು ಮೆರಗು ನೀಡಿತ್ತು ದಿನಾಂಕ 25.09.2019 ರಿಂದ 28.09.2019 ರವರೆಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಇಡೀ ವಾರಪೂರ್ತಿ ಬಣ್ಣಗಳ ದಿನವನ್ನಾಗಿ ಆಚರಿಸಿ ಸಂಭ್ರಮಿಸಲಾಯಿತು. ರಂಗೋಲಿ ಸ್ಪರ್ಧೆ, ಮೆಹಂದಿ, ಬೆಂಕಿಯಿಲ್ಲದ ಅಡುಗೆ ಸ್ಪರ್ಧೆಯು ಐ.ಐ.ಎಚ್.ಎಂ. ಅವರ ತೀರ್ಪುಗಾರಿಕೆಯಲ್ಲಿ ನಡೆದದ್ದು ವಿಶೇಷವಾಗಿತ್ತು. **'ಎಚ್ಚೆನ್ ನೂರರ ನೆನಪು'** ಎಂಬ ಶೀರ್ಷಿಕೆಯಡಿಯಲ್ಲಿ ಚಿತ್ರಸಂಯೋಜನೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಮಡಿಕೆಯಲ್ಲಿ ಚಿತ್ತಾರ, ಕೇಶಾಲಂಕಾರ ಹಾಗೂ 'ನಮ್ಮ ಬೆಂಗಳೂರು' ವಿಷಯದ ಕುರಿತಾದ ಕಿರುಚಿತ್ರ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.


ರಕ್ಷಿತಾ – ದ್ವಿತೀಯ ಪಿಯು 'ಎಫ್'

29.09.2019 ರಂದು ಸಾಂಪ್ರದಾಯಿಕ ಉಡುಗೆ ತೊಟ್ಟು ವಿದ್ಯಾರ್ಥಿಗಳು ಹಬ್ಬದ ವಾತಾವರಣವನ್ನು ಸೃಷ್ಟಿಸಿದರು. ನೃತ್ಯ ಸಂಗೀತದ ಮೂಲಕ ತಮ್ಮ ಪ್ರತಿಭೆಯ ಅನಾವರಣ ಮಾಡಿ ಎಲ್ಲರ ಮೆಚ್ಚುಗೆ ಗಳಿಸಿದರು.

ಈ ಬಾರಿಯ ವಿಶೇಷತೆಯೆಂದರೆ ಅಧ್ಯಾಪಕ ವೃಂದ ವಿದ್ಯಾರ್ಥಿಗಳೊಡನೆ ಮಾರ್ಜಾಲ ನಡಿಗೆಯಲ್ಲಿ ಜೊತೆಯಾಗಿ ಕಾರ್ಯಕ್ರಮದ ಮೆರಗನ್ನು ಹೆಚ್ಚಿಸಿದರು.

## ಗೀತಾಜಯಂತ್ಯೋತ್ಸವ

ಶ್ರೀ ಸುದರ್ಶನ ಟ್ರಸ್ಟ್, ಚೆನ್ನೈ ಹಾಗೂ ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ (ರಿ) ಬಸವನಗುಡಿ ಬೆಂಗಳೂರು ಸಹಭಾಗಿತ್ವದಲ್ಲಿ ದಿನಾಂಕ 7ನೇ ಡಿಸೆಂಬರ್ 2019 ರಂದು ಗೀತಾಜಯಂತಿಯನ್ನು ಆಚರಿಸಲಾಯಿತು. ಈ ಪ್ರಯುಕ್ತ ಬಸವನಗುಡಿ ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲೆ, ನ್ಯಾಷನಲ್ ಹೈಸ್ಕೂಲ್ ಹಾಗೂ ನ್ಯಾಷನಲ್ ಪದವಿಪೂರ್ವ ಕಾಲೇಜುಗಳಲ್ಲಿ ಭಗವದ್ಗೀತೆಗೆ ಸಂಬಂಧಪಟ್ಟಂತೆ ಗೀತಾ ಕಂಠಪಾಠ ಸ್ಪರ್ಧೆ, ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹಾಗೂ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.







ಈ ಎಲ್ಲ ಸ್ಪರ್ಧೆಗಳಲ್ಲಿ ನ್ಯಾಷನಲ್ ಪ್ರಾಥಮಿಕ ಶಾಲೆಯ 400 ವಿದ್ಯಾರ್ಥಿಗಳು ನ್ಯಾಷನಲ್ ಹೈಸ್ಕೂಲಿನ 600 ವಿದ್ಯಾರ್ಥಿಗಳು ಹಾಗೂ ನ್ಯಾಷನಲ್ ಪದವಿಪೂರ್ವ ಕಾಲೇಜಿನ ಸುಮಾರು 200 ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಬಹುಮಾನಗಳನ್ನು ತಮ್ಮದಾಗಿಸಿಕೊಂಡರು. ಕಾರ್ಯಕ್ರಮದ ಆರಂಭದಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರಾದ ಡಾ. ಎ.ಎಚ್. ರಾಮರಾವ್ ರವರು ಸಭೆಗೆ ಸ್ವಾಗತ ಕೋರಿ ಮುಖ್ಯ ಅತಿಥಿಗಳ ಪರಿಚಯವನ್ನು ಮಾಡಿದರು. ಕಾರ್ಯ–ಕ್ರಮದ ಮುಖ್ಯ ಅತಿಥಿಗಳಾಗಿ ಖ್ಯಾತ ಸಂಸ್ಕೃತ ವಿದ್ವಾಂಸರಾದ ಶ್ರೀನಿಧಿ ಕೆ. ಪಾರ್ಥಸಾರಥಿ, ಮಾನ್ಯ ಕುಲಸಚಿವರು, ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ, ಜಿಗಣಿ ರವರು ಆಗಮಿಸಿ ವಿದ್ಯಾರ್ಥಿಗಳಿಗೆ ಭಗವದ್ಗೀತೆಗೆ ಸಂಬಂಧಿಸಿದ ಹಲವಾರು ಹಿತವಚನಗಳನ್ನು ಹೇಳಿದರು ಹಾಗೂ ಧ್ಯಾನವನ್ನು ಕಲಿಸಿಕೊಟ್ಟರು. ಶ್ರೀಸುದರ್ಶನ ಟ್ರಸ್ಟ್ ಚೆನ್ನೈ (ರಿ) ಪರವಾಗಿ ಶ್ರೀ ಎಂ. ನಾರಾಯಣನ್ ಹಾಗೂ ಶ್ರೀಮತಿ ಮಾಲತಿ ಕೃಷ್ಣಸ್ವಾಮಿ ಮತ್ತು ಶ್ರೀಮತಿ ಮಂಜರಿ ಜೆ. ಗುಬ್ಬಿಯವರು ಆಗಮಿಸಿ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಿದರು. ನ್ಯಾಷನಲ್ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ವಿ. ನಾರಾಯಣಸ್ವಾಮಿ, ನ್ಯಾಷನಲ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಡಾ. ವೆಂಕಟರಾಮ ಭಟ್ಟರ್, ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಸ್.ವಿ. ಗೋವಿಂದ ರಾಜು ಹಾಗೂ ನ್ಯಾಷನಲ್ ಇಂಗ್ಲಿಷ್ ಸ್ಕೂಲ್‌ನ ಪ್ರಾಚಾರ್ಯೆ ಶ್ರೀಮತಿ ಚಂದ್ರಿಕ ಎಂ. ಎಲ್. ರವರು ಉಪಸ್ಥಿತರಿದ್ದರು. ನ್ಯಾಷನಲ್ ಹೈಸ್ಕೂಲ್‌ನ ಉಪಮುಖ್ಯೋಪಾಧ್ಯಾಯರಾದ ಡಾ. ವೆಂಕರಾಮ ಭಟ್ಟರ್ ವಂದನಾರ್ಪಣೆಯನ್ನು ನೆರವೇರಿಸಿದರು. ನ್ಯಾಷನಲ್ ಪದವಿಪೂರ್ವ ಕಾಲೇಜು ಬಸವನಗುಡಿಯ ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಪ್ರೊ. ಬಾಲಕೃಷ್ಣ ದತ್ತ ಕಲಭಾಗ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು. ನಮ್ಮ ಕಾಲೇಜಿನ ನಿಕಟಪೂರ್ವ ಸಂಸ್ಕೃತ ಪ್ರಾಧ್ಯಾಪಕರೂ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಸಚಿವರೂ ಆದ ಡಾ. ಎಂ.ಕೆ. ಶ್ರೀಧರ ಅವರು ಕಾರ್ಯಕ್ರಮದ ಕುರಿತು ವರದಿಯನ್ನು ಮಂಡಿಸಿದರು. ಹಾಗೂ ಸಮಾರಂಭದ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಪ್ರಸಾದ ವಿನಿಯೋಗವನ್ನು ಮಾಡಲಾಯಿತು.

## ರಂಗ ಪ್ರಯೋಗ ಶಾಲೆ ನಾಟಕ ವಿಭಾಗ

**58ನೇ ಅಂತರವರ್ಗೀಯ ಕನ್ನಡ ನಾಟಕ ಸ್ಪರ್ಧೆ 2019–20**

ನಾಟಕದ ಕಾಲೇಜು ಎಂಬ ಹಿರಿಮೆಗೆ ಪಾತ್ರವಾದ ನಮ್ಮ ನ್ಯಾಷನಲ್ ಕಾಲೇಜು ಚಿತ್ರರಂಗಕ್ಕೆ ಹಾಗೂ ರಂಗಭೂಮಿಗೆ ಹೆಸರಾಂತ ನಟ ನಟಿಯರನ್ನು ನೀಡಿರುವುದು ಹೆಮ್ಮೆಯ ಸಂಗತಿ. ಪ್ರತಿ ವರ್ಷದಂತೆ ಈ ವರ್ಷವೂ ಸಹ ಇಡೀ ವಾರ ನಾಟಕೋತ್ಸವದ ಸಂಭ್ರಮ ಮನೆ ಮಾಡಿತ್ತು.

ದಿನಾಂಕ 11.11.2019 ರಿಂದ 16.11.2019ರ ವರೆಗೆ ಒಟ್ಟು 10 ನಾಟಕಗಳು ಪ್ರದರ್ಶನಗೊಂಡವು. ನಾಟಕ ಸ್ಪರ್ಧೆಗೆ ಪೂರಕವಾಗಿ ಶ್ರೀ ಮೊಹಮ್ಮದ್ ಅಲಿ, ರಂಗಕರ್ಮಿ ಹಾಗೂ ನಿರ್ದೇಶಕರು, ಒಂದು ದಿನದ ಕಾರ್ಯಾಗಾರವನ್ನು ನಡೆಸಿಕೊಟ್ಟರು.

ಈ ವರ್ಷದ ನಾಟಕೋತ್ಸವವನ್ನು ಪ್ರಸಿದ್ಧ ಚಲನಚಿತ್ರ ನಿರ್ದೇಶಕರಾದ ಪಿ. ಶೇಷಾದ್ರಿಯವರು ಉದ್ಘಾಟಿ–ಸಿದರು. ನಾಟಕೋತ್ಸವಕ್ಕೆ ತೀರ್ಪುಗಾರರಾಗಿ ನ್ಯಾಷನಲ್ ಪದವಿ ಕಾಲೇಜಿನ ಉಪನ್ಯಾಸಕರಾದ ಶ್ರೀ ಜಗದೀಶ್ ಬಿ. ಜಿ. ಹಾಗೂ ಶ್ರೀ ಶ್ರೀನಿವಾಸ ಮೂರ್ತಿಯವರು ಆಗಮಿಸಿ ಒಟ್ಟು ನಾಟಕಗಳನ್ನು ವಿಮರ್ಶಿಸಿ ತಮ್ಮ ತೀರ್ಪನ್ನು ನೀಡಿದರು. ವಿಜೇತರಿಗೆ ದಿನಾಂಕ 29.12.2019 ರಂದು ತೀರ್ಪುಗಾರರು ಮತ್ತು ಪ್ರಾಂಶುಪಾಲರ ಸಮ್ಮುಖದಲ್ಲಿ ಬಹುಮಾನ ನೀಡಿ ಅಭಿನಂದಿಸಲಾಯಿತು.







ಅತ್ಯುತ್ತಮ ನಾಟಕ
ಪ್ರಥಮ ಬಹುಮಾನ
ಕತ್ತರಿ ಕಾರ್ಪೋರೇಷನ್
ದ್ವಿತೀಯ ಪಿ.ಯು. 'ಎ'



ಅತ್ಯುತ್ತಮ ನಾಟಕ
ದ್ವಿತೀಯ ಬಹುಮಾನ
ದೈವ ಭೂತಾರಾಧನೆ
ದ್ವಿತೀಯ ಪಿ.ಯು. 'ಸಿ'



ಅತ್ಯುತ್ತಮ ನಾಟಕ
ತೃತೀಯ ಬಹುಮಾನ
ಶ್ರೀಕೃಷ್ಣ ಸಂಧಾನ
ದ್ವಿತೀಯ ಪಿ.ಯು.'ಎಫ್'



ತೀರ್ಪುಗಾರರ
ಮೆಚ್ಚುಗೆ ಪಡೆದ ನಾಟಕ,
ಹಳೆ ಬೇರು
ಹೊಸ ಚಿಗುರು
ಪ್ರಥಮ ಪಿ.ಯು. 'ಬಿ'





ಕತ್ತರಿ ಕಾರ್ಪೊರೇಷನ್ ನಾಟಕದ ದೃಶ್ಯ

## ವೈಯಕ್ತಿಕ ಬಹುಮಾನ

**ಪುರುಷ ಪಾತ್ರದಲ್ಲಿ ವಿದ್ಯಾರ್ಥಿನಿ**
**ಅಮೃತವರ್ಷಿಣಿ**
ದ್ವಿತೀಯ ಪಿಯುಸಿ 'ಡಿ'
ನಾಟಕ – ಮಾಡ್ರನ್ ರಾಮಾಯಣ

**ಸ್ತ್ರೀ ಪಾತ್ರದಲ್ಲಿ ವಿದ್ಯಾರ್ಥಿ**
**ಚಂದ್ರಶೇಖರ್**
ದ್ವಿತೀಯ ಪಿಯುಸಿ 'ಎಫ್'
ನಾಟಕ ಶ್ರೀ ಕೃಷ್ಣ ಸಂಧಾನ

**ಅತ್ಯುತ್ತಮ ರಂಗ ಸಜ್ಜಿಕೆ**
**ನಾಟಕ – ಕತ್ತರಿ ಕಾರ್ಪೊರೇಷನ್**
ದ್ವಿತೀಯ ಪಿಯುಸಿ 'ಎ'

**ಅತ್ಯುತ್ತಮ ನಿರ್ದೇಶನ**
**ಸೂರ್ಯಸಾಥಿ**
ನಾಟಕ – ಕತ್ತರಿ ಕಾರ್ಪೊರೇಷನ್
ದ್ವಿತೀಯ ಪಿಯುಸಿ 'ಎ'

**ಅತ್ಯುತ್ತಮ ವಸ್ತ್ರವಿನ್ಯಾಸ**
**ಶ್ರೀ ಕೃಷ್ಣಸಂಧಾನ**
ದ್ವಿತೀಯ ಪಿಯುಸಿ 'ಎಫ್'

**ವರ್ಷದ ಅತ್ಯುತ್ತಮ ನಟ**
**ಸೂರ್ಯಸಾಥಿ**
ದ್ವಿತೀಯ ಪಿಯುಸಿ 'ಎ'
ನಾಟಕ – ಕತ್ತರಿ ಕಾರ್ಪೊರೇಷನ್

**ಅತ್ಯುತ್ತಮ ಅಭಿನಯ**
ಪ್ರಥಮ ಬಹುಮಾನ
**ಹರೀಶ್ ಕುಮಾರ್**
ದ್ವಿತೀಯ ಪಿಯುಸಿ 'ಸಿ'
ನಾಟಕ – ದೈವ ಭೂತಾರಾಧನೆ

**ಅತ್ಯುತ್ತಮ ಅಭಿನಯ**
ದ್ವಿತೀಯ ಬಹುಮಾನ
**ಮೇಘನ**
ಪ್ರಥಮ ಪಿಯುಸಿ 'ಬಿ'
ನಾಟಕ – ಹಳೆ ಬೇರು ಹೊಸ ಚಿಗುರು

**ಅತ್ಯುತ್ತಮ ಅಭಿನಯ**
ತೃತೀಯ ಬಹುಮಾನ
**ವಿನೋದ್ ವಿ.**
ದ್ವಿತೀಯ ಪಿಯುಸಿ 'ಎಫ್'
ನಾಟಕ – ಶ್ರೀ ಕೃಷ್ಣ ಸಂಧಾನ

## ಪ್ರತೀ ನಾಟಕದಲ್ಲಿ ಉತ್ತಮ ಅಭಿನಯ ಪಟು

| ನಾಟಕದ ಹೆಸರು | ಪಾತ್ರ | ಪಾತ್ರಧಾರಿ | ವಿಭಾಗ |
|---|---|---|---|
| ಕತ್ತರಿ ಕಾರ್ಪೊರೇಷನ್ | ಸಿಡುಕಪ್ಪ | ವಿಠಲ್ ಬಿ. ಎನ್. | ದ್ವಿತೀಯ ಪಿಯುಸಿ 'ಎ' |
| ಇನ್‌ಕಲಾಬ್ ಜಿಂದಾಬಾದ್ | ಭಗತ್ ಸಿಂಗ್ | ಕೀರ್ತಿಭೂಷಣ್ | ಪ್ರಥಮ ಪಿಯುಸಿ 'ಸಿ' |
| ದೈವ ಭೂತಾರಾಧನೆ | ಮಂಗಳೂರಪ್ಪ | ಅನಂತರಾಜು | ದ್ವಿತೀಯ ಪಿಯುಸಿ 'ಸಿ' |
| ಡಾಕ್ಟರ್ ನಂಬರ್ 1 | ಡಾ|| ಶ್ರೀಕಾಂತ್ | ಪ್ರತೀಕ್ಷ | ಪ್ರಥಮ ಪಿಯುಸಿ 'ಇ' |
| ವಿಪರ್ಯಾಸ | ಕಣ್ಣಪ್ಪ | ಕಿಶೋರ್‌ಚಕ್ರವರ್ತಿ | ಪ್ರಥಮ ಪಿಯುಸಿ 'ಎ' |
| ಶಾಕುಂತಲೆ ಮತ್ತು ದುಷ್ಯಂತ | ಶಾಕುಂತಲೆ | ಯೋಗಲಕ್ಷ್ಮಿಯಾದವ್ | ಪ್ರಥಮ ಪಿಯುಸಿ 'ಎಫ್' |
| ಜನುಮ ಜನುಮದ ಅನುಬಂಧ | ಪಚಡಿ ರಾಜ | ಸುಹಾಸ್ ಎಸ್. | ಪ್ರಥಮ ಪಿಯುಸಿ 'ಡಿ' |
| ಮಾಡ್ರನ್ ರಾಮಾಯಣ | ಸೀತೆ | ತನುಸಿಂಧೆ | ದ್ವಿತೀಯ ಪಿಯುಸಿ 'ಡಿ' |
| ಹಳೆ ಬೇರು ಹೊಸ ಚಿಗುರು | ಶೀಲಾವತಿ | ದೀಕ್ಷ | ಪ್ರಥಮ ಪಿಯುಸಿ 'ಬಿ' |
| ಶ್ರೀಕೃಷ್ಣ ಸಂಧಾನ | ದುರ್ಯೋಧನ | ಶಿಶುವೆಂಕ್ | ದ್ವಿತೀಯ ಪಿಯುಸಿ 'ಎಫ್' |

ನಾಟಕ ವಿಭಾಗದ ಸಂಚಾಲಕರಾದ ಶ್ರೀ ರವಿ ಕುಮಾರ್ ಕೆ. ಬಿ. ಹಾಗೂ ತಂಡದವರನ್ನು ಕಾಲೇಜು ಮತ್ತು ಆಡಳಿತ ಮಂಡಳಿ ಅಭಿನಂದಿಸುತ್ತದೆ.





## ವಿದ್ಯಾರ್ಥಿಗಳ ಸಾಧನೆ

**ಸೂರ್ಯಸಾಥಿ**
ದ್ವಿತೀಯ ಪಿಯುಸಿ 'ಎ' ವಿಭಾಗ



- ವಿಜಯನಗರ 'ಬಿಂಬ' ರಂಗ ಶಿಕ್ಷಣ ಕೇಂದ್ರದಲ್ಲಿ ಏಳು ವರ್ಷಗಳ ಕಾಲ ಬಾಲ ರಂಗಕರ್ಮಿಯಾಗಿ ತರಬೇತಿ ಪಡೆದಿರುವ ಸೂರ್ಯಸಾಥಿ 2018–19ನೇ ಸಾಲಿನ ಡಿಪ್ಲೊಮಾ ಇನ್ ಥಿಯೇಟರ್ ತರಬೇತಿಯನ್ನು ಪೂರ್ಣಗೊಳಿಸಿರುತ್ತಾನೆ. 86% ಅಂಕಗಳೊಂದಿಗೆ ಚಿನ್ನದ ಪದಕವನ್ನು ಪಡೆದು ಡಿಪ್ಲೋಮಾದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿರುತ್ತಾನೆ

- ಈ ವರೆಗೆ ಐದು ಕಿರುನಾಟಕಗಳನ್ನು ರಚಿಸಿ ನಿರ್ದೇಶಿಸಿದ್ದಾನೆ **ಲಿಯೋ ಟಾಲ್‌ಸ್ಟಾಯ್** ಅವರ **'ಡೆತ್ ಆಫ್ ಐವಾನ ಇಲ್ಯಿಚ್'** ಎಂಬ ಕತೆಯನ್ನು **'ಇಲ್ಯಿಚ್ ಸತ್ತೋದ'** ಎಂಬ ಹೆಸರಿನಲ್ಲಿ ನಾಟಕಕ್ಕೆ ಅಳವಡಿಸಿಕೊಂಡಿದ್ದಾನೆ. ಸದ್ಯ, ದೇಶದ ಕೋಮುಗಲಭೆಯಲ್ಲಿ ಕಂಡು ಬಂದಂಹ ಒಂದು ಸತ್ಯ ಘಟನೆಯನ್ನು ಆಧರಿಸಿ **'ಮೋಚಿ'** ಎಂಬ ನಾಟಕದ ರಚನೆಯಲ್ಲಿ ನಿರತನಾಗಿದ್ದಾನೆ.

- ಮೂರು ಚಲನಚಿತ್ರಗಳಲ್ಲಿ ಈ ಹಿಂದೆ ಅಭಿನಯಿಸಿದ ಇವನು ಈ ವರ್ಷ ರಾಷ್ಟ್ರ ಪ್ರಶಸ್ತಿ ವಿಜೇತ, ಚಲನ ಚಿತ್ರ ನಿರ್ದೇಶಕರಾದಂತಹ **ಶ್ರೀ ಪಿ. ಶೇಷಾದ್ರಿ ಯವರ 'ಮೋಹನದಾಸ'** ಎಂಬ ತ್ರಿಭಾಷಾ ಚಿತ್ರದಲ್ಲಿ ನಟಿಸಿರುತ್ತಾನೆ. ಈ ಚಿತ್ರವು ಬಿಡುಗಡೆಗೆ ಸಿದ್ದವಾಗಿದೆ.

- ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಪ್ರಥಮ ಅಖಿಲಭಾರತ ಕನ್ನಡ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ **'ರಾಷ್ಟ್ರ ನಿರ್ಮಾಣದಲ್ಲಿ ಯುವಜನತೆ–ಶಿಕ್ಷಣ'** ಎಂಬ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿ ಮೆಚ್ಚುಗೆಗೆ ಪಾತ್ರನಾಗಿದ್ದಾನೆ. ಜೂನ್ 2019 ರಲ್ಲಿ (Centre for Community dialogue and exchange' ಎಂಬ NGO ಬಳಿ ಶೋಷಿತರ ರಂಗಭೂಮಿ (Theatre of the Opressed) ಎಂಬ ರಂಗತರಬೇತಿಯನ್ನು ಪಡೆದಿರುತ್ತಾನೆ.

- ಸಂವಾದ ಯುವ ಸಂಪನ್ಮೂಲ ಕೇಂದ್ರ ಆಯೋಜಿಸಿದ್ದ ಯುವಾಭಿವ್ಯಕ್ತಿ ಅಂತರ ಕಾಲೇಜು ಸ್ಪರ್ಧೆಗಳಲ್ಲಿ ಸೂರ್ಯಸಾಥಿ ರಚಿಸಿ ನಿರ್ದೇಶಿಸಿದ **'ಟಾಯ್ಲೆಟ್ ಪುರಾಣ'** ನಾಟಕಕ್ಕೆ 3ನೇ ಬಹುಮಾನ ದೊರಕಿದೆ.

- ಪದವಿಪೂರ್ವ ಶಿಕ್ಷಣ ಇಲಾಖೆ ಆಯೋಜಿಸಿದ್ದ ಜಿಲ್ಲಾ ಮಟ್ಟದ ಅಂತರಕಾಲೇಜು ಸ್ಪರ್ಧೆಯಲ್ಲಿ ಏಕ ಪಾತ್ರಾಭಿನಯಕ್ಕೆ ಮೊದಲ ಬಹುಮಾನವನ್ನು ಪಡೆದಿರುತ್ತಾನೆ.

- ಯುವಾಭಿವ್ಯಕ್ತಿ 2019 ಹಾಗು ನ್ಯಾಷನಲ್ ಪದವಿ ಕಾಲೇಜು ಆಯೋಜಿಸಿದ್ದ ಕವಿತಾ ವಾಚನ ಸ್ಪರ್ಧೆಗಳಲ್ಲಿ ತೃತೀಯ ಬಹುಮಾನ ಪಡೆದಿರುತ್ತಾನೆ.

- ಇವನ ನಿರ್ದೇಶನದ **'ಕತ್ತರಿ ಕಾರ್ಪೋರೇಶನ್'** ಎಂಬ ಅಸಂಗತ ನಾಟಕ ಅಂತರವರ್ಗೀಯ ಕನ್ನಡ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದೆ. ವೈಯಕ್ತಿಕವಾಗಿ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಯೂ ಇವನಿಗೆ ಲಭಿಸಿರುವುದು ಹರ್ಷದ ಸಂಗತಿ. ಈ ವಿದ್ಯಾರ್ಥಿಗೆ ಕಾಲೇಜಿನ ಪರವಾಗಿ ಅಭಿನಂದನೆಗಳು.

**ಸುಹಾಸ್ ಎಲ್.**
ದ್ವಿತೀಯ ಪಿಯುಸಿ 'ಸಿ' ವಿಭಾಗ



ಸಿನಿಮಾ ನಿರ್ದೇಶದದ ಒಲವಿನಿಂದಾಗಿ ಈ ವಿದ್ಯಾರ್ಥಿಯು ಈವರೆಗೆ 3 ಕಿರುಚಿತ್ರಗಳನ್ನು ರಚಿಸಿ, ನಿರ್ದೇಶಿಸಿ ಅಭಿನಯಿಸಿರುತ್ತಾನೆ. ಇವನ ನಿರ್ದೇಶನದ **'ಗಾಜಿನ ಪ್ರಪಂಚ'** ಎಂಬ ಕಿರುಚಿತ್ರವು ಅಂತರ ಕಾಲೇಜು ಸ್ಪರ್ಧೆಯಲ್ಲಿ ಬಹುಮಾನ ಪಡೆದು 'ಯುಟ್ಯೂಬ್'ನಲ್ಲಿ ಮೆಚ್ಚುಗೆಯನ್ನು ಪಡೆದುಕೊಂಡಿದೆ.

2019ರಲ್ಲಿ ಬಿಡುಗಡೆಯಾದ **'ರಾಜಲಕ್ಷ್ಮಿ'** ಎಂಬ ಕನ್ನಡ ಸಿನಿಮಾದಲ್ಲಿ ಅಭಿನಯಿಸಿರುತ್ತಾನೆ. **'ತ್ರಿಶೂಲಂ'** ಎಂಬ ಹೊಸ ಕನ್ನಡ ಸಿನಿಮಾಗೆ ಆಯ್ಕೆಯಾಗಿದ್ದು, ಕಾಲೇಜಿನ 'ನಾಡುನುಡಿ' ಸಂಭ್ರಮದಲ್ಲಿ ಇವನ **'ಬೆಂಗಳೂರು ಕನ್ನಡ'** ಎಂಬ ಕಿರುಚಿತ್ರವು ಪ್ರಥಮ ಬಹುಮಾನವನ್ನು ಪಡೆದುಕೊಂಡಿದೆ.

**ಮನೋಹರ ಕೆ.**
ದ್ವಿತೀಯ ಪಿಯುಸಿ 'ಎಫ್' ವಿಭಾಗ



ದ್ವಿತೀಯ ಪಿಯುಸಿ 'ಎಫ್' ವಿಭಾಗದಲ್ಲಿ ಓದುತ್ತಿರುವ ವಿದ್ಯಾರ್ಥಿ ಮನೋಹರ ಕೆ. **'ರೈಲ್ವೇ ಚಿಲ್ಡ್ರನ್'** ಎಂಬ ಸಿನಿಮಾದಲ್ಲಿನ ನಟನೆಗಾಗಿ 2017ನೇ ಸಾಲಿನ 64ನೇ **ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ 'ಅತ್ಯುತ್ತಮ ಬಾಲನಟ'** ಪ್ರಶಸ್ತಿಗೆ ಭಾಜನನಾಗಿರುತ್ತಾನೆ. ಕೆಂಗೇರಿ ಉಪನಗರದ ಎಸ್. ಸೋನಿಯಾ ಎಂಬ ಬಾಲಕಿ ಹುಟ್ಟಿನೊಂದಿಗೆ 'ಪಾಂಡುರೋಗ'





(Albinism) ಕಟ್ಟಿಕೊಂಡು ಬಂದ ಹುಡುಗಿ 10ನೇ ತರಗತಿಯಲ್ಲಿರುವಾಗ ಪ್ರಕಟಿಸಿದ **'ಮಿಕ್ಕ ಬಣ್ಣದ ಹಕ್ಕಿ'** ಕೃತಿ ಪಾಂಡುರೋಗಿಗಳಿಗೆ ಸಾಂತ್ವನ ಹೇಳುತ್ತದೆ. ಕನ್ನಡದಲ್ಲಿ ಆತ್ಮಕಥನ ರಚಿಸಿದ ಕಿರಿಯ ಲೇಖಕಿ (15 ವರ್ಷ 5 ತಿಂಗಳು) ಎಂಬ ಶ್ರೇಯವನ್ನು 'ಇಂಡಿಯಾ ಬುಕ್ ಆಫ್ ರೆಕಾರ್ಡ್' ಸಂಸ್ಥೆ ಸೋನಿಯಾಗೆ ನೀಡಿದೆ. ಈ ಆತ್ಮಕಥನವನ್ನು ಆಧಾರವಾಗಿಟ್ಟುಕೊಂಡು **'ಮಿಕ್ಕ ಬಣ್ಣದ ಹಕ್ಕಿ'** ಎಂಬ ಮಕ್ಕಳ ಚಿತ್ರಕ್ಕೆ ನಮ್ಮ ವಿದ್ಯಾರ್ಥಿ ಮನೋಹರ್ ತಾನೇ ಚಿತ್ರಕಥೆ ಬರೆದು ನಿರ್ದೇಶನದ ಜವಾಬ್ದಾರಿಯನ್ನೂ ಹೊತ್ತಿರುತ್ತಾನೆ. ಇದಲ್ಲದೇ ರೈಲ್ವೆ ಚಿಲ್ಡ್ರನ್ ಚಿತ್ರದ ನಿರ್ದೇಶಕರಾದ ಪೃಥ್ವಿ ಕೊಣನೂರು ರವರ ಮತ್ತೊಂದು ಚಿತ್ರ **'ಪಿಂಕಿ'** ಯಲ್ಲೂ ನಟಿಸಿರುತ್ತಾನೆ. ಈ ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಈ ವಿದ್ಯಾರ್ಥಿಗೆ ಅಭಿನಂದನೆಗಳು.

## NiAS-MaiYa
## PRODIGY FELLOWSHIP

ವಿಜ್ಞಾನದ ವಿವಿಧ ಕ್ಷೇತ್ರಗಳಾದ ಗಣಿತ, ಅನ್ವಯಿಕ ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಅಂತಾ-ರಾಷ್ಟ್ರೀಯ ಮಟ್ಟದ ವಿಜ್ಞಾನಿಗಳು ನಮ್ಮ ನೆಲದಲ್ಲಿ ಬೆಳೆಯಬೇಕಾದ ಅಗತ್ಯವಿದೆ. ಆದರೆ ಈ ಅಗತ್ಯ ನೆರವೇರಬೇಕಾದರೆ, ಅಂತಹ ಮಟ್ಟಕ್ಕೇರಬಲ್ಲ ಅರ್ಹತೆಯಿರುವವರನ್ನು ಎಳವೆಯಲ್ಲೇ ಗುರುತಿಸಿ ಸೂಕ್ತ ಪ್ರೋತ್ಸಾಹ ಮತ್ತು ಪೋಷಣೆ ಮಾಡುವುದು ಒಂದು ಜವಾಬ್ದಾರಿಯಾಗಿದೆ. ಇದನ್ನು ಮನಗಂಡ ಸಮಾಜದ ಕೆಲ ಹಿರಿಯರು ಸಾಂಸ್ಥಿಕವಾಗಿ ಒಗ್ಗೂಡಿ ಈ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೇರಿ-ಸಿಕೊಂಡಿದ್ದಾರೆ. ಅದರ ಅಂಗವಾಗಿ ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ ಮತ್ತು ಮಯ್ಯ ವಿಶಿಷ್ಟ ಬಾಲಪ್ರತಿಭೆ ಪ್ರೋತ್ಸಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಬೆಂಗಳೂರಿನ ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆ, ಎನ್.ಐ.ಎಸ್. ಶಿಕ್ಷಣ ಸಂಸ್ಥೆಯ ನ್ಯಾಷನಲ್ ಕಾಲೇಜು, ಬಸವನಗುಡಿ ಮತ್ತು ದಿ ಅಯ್ಯಂಗಾರ್ ಮೆಡಿಕಲ್ ಫೌಂಡೇಷನ್ ಸಂಸ್ಥೆಗಳು ವಿಶಿಷ್ಟ ಪ್ರತಿಭೆಗಳನ್ನು ಗುರುತಿಸಿ ಪೋಷಿಸುವ ಕಾರ್ಯಕ್ಕೆ ಕೈಗೂಡಿಸಿವೆ. ಪ್ರತಿಭೆಗಳನ್ನು ಗುರುತಿಸಲು ಪದವಿ ಪೂರ್ವ ತರಗತಿಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಸೂಕ್ತ ಮಾನದಂಡಗಳನ್ವಯ ಮೊದಲಿಗೆ ಪ್ರವೇಶ ಪರೀಕ್ಷೆಯನ್ನು ನಡೆಸಿ ಆಯ್ದ ಅಭ್ಯರ್ಥಿಗಳಿಗೆ ವಿಸ್ತೃತ ಸಂದರ್ಶನ ಏರ್ಪಡಿಸಲಾಗಿತ್ತು. ಅದರಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ತಲಾ ಐವತ್ತು ಸಾವಿರ ರೂಪಾಯಿ ಬಹುಮಾನಗಳನ್ನು ನೀಡಲಾಯಿತು. ಜೊತೆಗೆ ಅವರ ಜ್ಞಾನವನ್ನು ಸೂಕ್ತವಾಗಿ ಪೋಷಿಸುವ ಜವಾಬ್ದಾ-ರಿಯನ್ನು ಈ ಸಂಸ್ಥೆಗಳು ಹೆಗಲಿಗೇರಿಸಿಕೊಂಡಿವೆ. **ನಮ್ಮ ಕಾಲೇಜಿನ ದ್ವಿತೀಯ ಪಿಯು 'ಎ' ವಿಭಾಗದ ಹಿತಾ ಅನಂತ್ ಈ ಬಾರಿ ಫೆಲೋಶಿಪ್‌ಗೆ ಆಯ್ಕೆಯಾಗಿರುವುದು ಹರ್ಷದ ಸಂಗತಿ.**

ಬಹುಮಾನ ವಿತರಣಾ ಕಾರ್ಯಕ್ರಮವು ರಾಷ್ಟ್ರೀಯ ಉನ್ನತ ಅಧ್ಯಯನ ಕೇಂದ್ರದ ಟಾಟಾ ಸಭಾಂಗಣದಲ್ಲಿ ಜನವರಿ 3 2020ರಂದು ನೆರವೇರಿತು. ನಿಯಾಸ್ ಸಂಸ್ಥೆಯ ನಿರ್ದೇಶಕರಾದ ಡಾ. ಶೈಲೇಶ್ ನಾಯಕ್, ಅಯ್ಯಂಗಾರ್ ಫೌಂಡೇಶನ್ನಿನ ಸಂಸ್ಥಾಪಕರಾದ ಕಂಪ್ಯೂಟರ್ ವಿಜ್ಞಾನಿ ಡಾ. ಎನ್. ಸೀತಾರಾಮ ಅಯ್ಯಂಗಾರ್, ಡಾ. ಟಿ. ರಾಮಸ್ವಾಮಿ, ಕಾರ್ಯ-ದರ್ಶಿಗಳು, ಡಿ.ಎಸ್.ಟಿ. ಭಾರತ ಸರ್ಕಾರ, ಪ್ರೊ. ಕೆ. ಆರ್. ವೇಣು ಗೋಪಾಲ್ ಉಪಕುಲಪತಿಗಳು ಬೆಂಗಳೂರು ವಿ. ವಿ., ಎನ್.ಐ.ಎಸ್. ಸಂಸ್ಥೆಯ ಅಧ್ಯಕ್ಷರಾದ ಡಾ. ಎ. ಎಚ್. ರಾಮರಾವ್, ಎನ್.ಐ.ಎಸ್.ನ ಗೌರವ ಕಾರ್ಯದರ್ಶಿಗಳಾದ ಡಾ. ಪಿ. ಸದಾನಂದ ಮಯ್ಯ, ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕಿ ಡಾ. ಅನಿತ ಕುರುಪ್ ಇವರ ಸಮ್ಮುಖದಲ್ಲಿ ಬಹುಮಾನ ವಿತರಿಸಲಾಯಿತು.







## ಅಂತರ ಕಾಲೇಜು ಚರ್ಚಾ ಸ್ಪರ್ಧೆ

ಪ್ರಸಕ್ತ ಸಾಲಿನಲ್ಲಿ ವಿವಿಧ ಕಾಲೇಜಿನಲ್ಲಿ ನಡೆದ ಅಂತರಕಾಲೇಜು ರಾಜ್ಯಮಟ್ಟದ ಚರ್ಚಾಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಪರ್ಯಾಯ ಪಾರಿತೋಷಕವನ್ನು ಪಡೆದುಕೊಂಡಿರುತ್ತಾರೆ. ಇವರಿಗೆ ನಮ್ಮ ಕಾಲೇಜಿನ ಪರವಾಗಿ ಅಭಿನಂದನೆಗಳು.







**ಶಾರದಾ ವಿದ್ಯಾಪೀಠ ಕಾಲೇಜು** ಆಯೋಜಿಸಿದ್ದ ರಾಜ್ಯಮಟ್ಟದ ಚರ್ಚಾಸ್ಪರ್ಧೆಯಲ್ಲಿ ದ್ವಿತೀಯ ಪಿಯು 'ಸಿ' ವಿಭಾಗದ ವಿದ್ಯಾರ್ಥಿಗಳಾದ ಅನಂತರಾಜು ಹಾಗೂ ಹರೀಶ್‌ಕುವಾರ್ ಭಾಗವಹಿಸಿ ಪರ್ಯಾಯ ಪಾರಿತೋಷಕವನ್ನು ಪಡೆದಿರುತ್ತಾರೆ.

**ಕೃಷ್ಣಯ್ಯರ್ ಕಾಲೇಜು** ಆಯೋಜಿಸಿದ್ದ ಚರ್ಚಾ ಸ್ಪರ್ಧೆಯಲ್ಲಿ ದ್ವಿತೀಯ ಪಿಯು 'ಎಫ್' ವಿಭಾಗದ ಜಗದೀಶ್ ಮತ್ತು ದ್ವಿತೀಯ ಪಿಯುಸಿ 'ಸಿ' ವಿಭಾಗದ ಅನಂತರಾಜು ಪರ್ಯಾಯ ಪಾರಿತೋಷಕವನ್ನು ತಮ್ಮದಾಗಿಸಿಕೊಂಡು ಕಾಲೇಜಿಗೆ ಹೆಮ್ಮೆಯ ಗರಿ ಮೂಡಿಸಿರುತ್ತಾರೆ.

**ಭಾರತ ಮಾತಾ ವಿದ್ಯಾಸಂಸ್ಥೆ**ಯ ಚರ್ಚಾಸ್ಪರ್ಧೆಯಲ್ಲಿ ಜಗದೀಶ್ ಮತ್ತು ಅನಂತರಾಜು ಚರ್ಚಾಪಟುಗಳು ಪರ್ಯಾಯ ಪಾರಿತೋಷಕವನ್ನು ಕಾಲೇಜಿನ ಮುಡಿಗೇರಿಸಿದ್ದಾರೆ. ಮತ್ತೆ ಇದೇ ಚರ್ಚಾಪಟು ಜೋಡಿಗಳು ರಾಜ್ಯಮಟ್ಟದ ಚರ್ಚಾ ಸ್ಪರ್ಧೆಯಾದ **'ವನಿತಾ ಸ್ಮಾರಕ'** ಪ್ರತಿಷ್ಠಾನದ ಪರ್ಯಾಯ ಪಾರಿತೋಷಕವನ್ನು ಎರಡನೆಯ ಬಾರಿ ಕಾಲೇಜಿಗೆ ತಂದು ಕೊಟ್ಟಿರುತ್ತಾರೆ. ಇವರಿಗೆ ನಮ್ಮ ಅಭಿನಂದನೆಗಳು.

ಪದವಿ ಪೂರ್ವ ಶಿಕ್ಷಣ ಇಲಾಖೆ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಸ್ಪರ್ಧಿಸಿರುತ್ತಾರೆ. ಆಶುಭಾಷಣ ಸ್ಪರ್ಧೆಯಲ್ಲಿ ಜಗದೀಶ್ ಡಿ. ಕೆ. ಏಕಪಾತ್ರಾಭಿನಯದಲ್ಲಿ ಸೂರ್ಯಸಾಥಿ ಹಾಗೂ ಜಾನಪದ ಗೀತೆ ಸ್ಪರ್ಧೆಯಲ್ಲಿ ಕರಣ್‌ರಾವ್‌ರವರು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

## ವಿವಿಧ ವಿಭಾಗಗಳ ಶೈಕ್ಷಣಿಕ ಚಟುವಟಿಕೆ

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕನ್ನಡ ವಿಭಾಗದಿಂದ ಚರ್ಚಾ ಸ್ಪರ್ಧೆ, ಆಶುಭಾಷಣ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆಗಳು ಏರ್ಪಡಿಸಲಾಗಿತ್ತು. ಹಾಗೆಯೇ ವಿವಿಧ ವಿಭಾಗಗಳಾದ ಗಣಿತಶಾಸ್ತ್ರ, ಜೀವಶಾಸ್ತ್ರ, ಮಾನವಿಕ ವಿಭಾಗ ಎಲೆಕ್ಟ್ರಾನಿಕ್ಸ್, ಹಿಂದಿ, ಸಂಸ್ಕೃತ ವಿಭಾಗ, ವಾಣಿಜ್ಯ ವಿಭಾಗ ವತಿಯಿಂದ ಪಠ್ಯಾಧಾರಿತ ಸ್ಪರ್ಧೆಗಳು, ಚಿತ್ರಕಲೆ ಮತ್ತು ಉಪನ್ಯಾಸ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಇಂಗ್ಲೀಷ್ ವಿಭಾಗವು ಸಹ ಶೈಕ್ಷಣಿಕ ಚಟುವಟಿಕೆಗಳನ್ನು ಆಯೋಜಿಸಿ ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಸಾಮಾನ್ಯ ಜ್ಞಾನ ಸ್ಪರ್ಧೆ ಹಾಗೂ ಗಾಂಧಿ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಗಾಂಧೀಜಿ ತತ್ವಾದರ್ಶಗಳ ಬಗೆಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಅಲ್ಲದೇ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳ ಇಂಗ್ಲೀಷ್ ಪಠ್ಯಕ್ಕೆ ಪೂರಕವಾಗಿ ಕೆಲವು ಚಲನಚಿತ್ರಗಳನ್ನು ಮುಖ್ಯವಾಗಿ **ಚಾರ್ಲಿ ಚಾಪ್ಲಿನ್‌ನ ಮಾಡರ್ನ್ ಟೈಮ್ಸ್, ಸರ್ಕಸ್, ದಿ ಸಾಂಗ್ ಆಫ್ ಸ್ಪ್ಯಾರೋಸ್ (ಇರಾನಿ), ಹಿಚ್ಕಿ (ಹಿಂದಿ) ಕಾಕಾಮುಟ್ಟೆ (ತಮಿಳು) ಕನ್ನಡ ಕಿರುಚಿತ್ರಗಳಾದ ಜಯನಗರ 4ನೇ ಬ್ಲಾಕ್, ನೂರು ರೂಪಾಯಿ, ಸ್ಕೂಲ್ ಬ್ಯಾಗ್ ಹಾಗೂ ಚಿಪ್ಕೊ ಚಳುವಳಿಯ ಬಗೆಗಿನ ಸಾಕ್ಷ್ಯಚಿತ್ರ, ವೃಕ್ಷಮಾತೆ ಸಾಲುಮರದ ತಿಮ್ಮಕ್ಕನವರ ಸಾಕ್ಷ್ಯಚಿತ್ರ, ರಾಷ್ಟ್ರಕವಿ ಕುವೆಂಪುರವರ ಸಾಕ್ಷ್ಯಚಿತ್ರ ಹಾಗೂ ವಿಶೇಷವಾಗಿ 'ಕಾಡ ಹಾದಿಯ ಹೂಗಳು' ಮತ್ತು 'ರೈಲ್ವೇ ಚಿಲ್ಡ್ರನ್' ಎಂಬ ಸಿನಿಮಾಗಳನ್ನೂ ಕೂಡ ಪ್ರದರ್ಶಿಸಲಾಯಿತು.**

## ವೈದ್ಯಕೀಯ ತಪಾಸಣಾ ಶಿಬಿರ

ದಿನಾಂಕ 05-11-2019 ಮತ್ತು 06-11-2019 ರಂದು ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶನದನ್ವಯ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವೈದ್ಯಕೀಯ ತಪಾಸಣೆ ಮಾಡಲಾಯಿತು.

ಈ ಶಿಬಿರವು ಸಾಮಾನ್ಯ ಆರೋಗ್ಯ ತಪಾಸಣೆ, ಕಣ್ಣಿನ ತಪಾಸಣೆ, ದಂತ ತಪಾಸಣೆ ಒಳಗೊಂಡಿತ್ತು. ಈ ಎರಡು ದಿನಗಳ ಆರೋಗ್ಯ ತಪಾಸಣಾ ಶಿಬಿರವನ್ನು ಲಯನ್ಸ್ ಕ್ಲಬ್, ಬೆಂಗಳೂರು ದಕ್ಷಿಣ ವಿಭಾಗ ಹಾಗೂ ಅಗರ್‌ವಾಲ್ ಕಣ್ಣಿನ ಆಸ್ಪತ್ರೆಯವರು ನಡೆಸಿಕೊಟ್ಟರು. ಸುಮಾರು 400 ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡರು. ಶಿಬಿರದ ನೇತೃತ್ವವನ್ನು ರಸಾಯನ ಶಾಸ್ತ್ರ ವಿಭಾಗದ ಪ್ರೊ. ಎಂ. ಪಿ. ಜಗದೀಶ್ ವಹಿಸಿದ್ದರು.







## ನ್ಯಾಷನಲ್ ಕಾಲೇಜು ವಿದ್ಯಾರ್ಥಿ ನಿಲಯ

ಆರು ದಶಕಗಳ ಹಿಂದೆ "ಪೂರ್ ಬಾಯ್ಸ್ ಹೋಮ್" ಯಿಂದ ಪ್ರಾರಂಭವಾದ ಈ ವಿದ್ಯಾರ್ಥಿನಿಲಯವು ಡಾ.ಎಚ್.ಎನ್. ಅವರನ್ನು ಒಳಗೊಂಡಂತೆ ಬಡ ವಿದ್ಯಾರ್ಥಿಗಳಿಗೆ ಆಶ್ರಯವಿತ್ತಿದೆ. ಪ್ರಸ್ತುತ ಈ ವಿದ್ಯಾರ್ಥಿನಿಲಯದಲ್ಲಿ ನ್ಯಾಷನಲ್ ಪ್ರೌಢಶಾಲೆ, ಪದವಿ ಪೂರ್ವ, ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ 85 ವಿದ್ಯಾರ್ಥಿಗಳು ಇದ್ದಾರೆ ಇದರ ಉಸ್ತುವಾರಿಯನ್ನು ನಮ್ಮ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರೊ|| ಸಿ. ಆರ್. ಪ್ರಕಾಶ್ ರವರು ವಹಿಸಿಕೊಂಡಿದ್ದಾರೆ.

ಈ ನಿಲಯದಲ್ಲಿ ವ್ಯಾಸಂಗ ಮಾಡಿದ ಹಿರಿಯ ವಿದ್ಯಾರ್ಥಿಗಳು ಇಂದು ಸಮಾಜದ ಅನೇಕ ರಂಗಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಕ್ರೀಡಾ–ಕೂಟ, ಪ್ರತಿಭಾದಿನಾಚರಣೆ ಹಾಗೂ ಒಂದು ತಿಂಗಳುಗಳ ಕಾಲ ಯೋಗ ಮತ್ತು ಪ್ರಾಣಾಯಾಮದ ಶಿಬಿರದ ಕಾರ್ಯಕ್ರಮಗಳನ್ನು ನಡೆಸಲಾಯಿತು.

ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ, ಕ್ರೀಡೆ ಹಾಗೂ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಳಿಸಿಕೊಂಡು ಉತ್ತಮ ಅಂಕಗಳನ್ನು ಪಡೆಯುವುದರ ಮೂಲಕ ವಿದ್ಯಾರ್ಥಿನಿಲಯಕ್ಕೆ ಕೀರ್ತಿತಂದಿರುತ್ತಾರೆ.





## ಜನ ಜಾಗೃತಿ ಜಾಥಾ

ನಮ್ಮ ಕಾಲೇಜಿನ ಯುವ ರೆಡ್ ಕ್ರಾಸ್ ತಂಡದ ವಿದ್ಯಾರ್ಥಿಗಳು ದೈಹಿಕ ಶಿಕ್ಷಣ ನಿರ್ದೇಶಕ ಶ್ರೀ ಸಿ. ಆರ್. ಪ್ರಕಾಶ್ ರವರ ನೇತೃತ್ವದಲ್ಲಿ ಬಾಗೇಪಲ್ಲಿ ಪಟ್ಟಣದಲ್ಲಿ ಆಯೋಜಿಸಿದ್ದ 'ಜನಜಾಗೃತಿ ಜಾಥಾ ಕಾರ್ಯಕ್ರಮ'ದಲ್ಲಿ ಭಾಗವಹಿಸಿ ರಸ್ತೆ ಅಪಘಾತ, ಪರಿಸರ ಸಂರಕ್ಷಣೆ, ಪ್ಲಾಸ್ಟಿಕ್ ನಿಷೇಧ, ಮಾದಕ ವಸ್ತುಗಳ ತಡೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು.



ಅಪಘಾತ ಆದಾಗ ವಿಡಿಯೋ ಮಾಡೋದು ಮಾನವೀಯತೆ ಅಲ್ಲ



- ಈ ಸಂಸ್ಥೆಯಿಂದ 'ಜೀವನ ಶಿಕ್ಷಣ' ದೊರೆತಿದೆ. ಇದು ನಿಜವಾದ ಶಿಕ್ಷಣ ಪದ್ಧತಿಯ ಅಬಿಭಾಜ್ಯ ಅಂಗವಾಗ ಬೇಕು. ಜಿವನ ಶಿಕ್ಷಣವಿಲ್ಲದ ಶಿಕ್ಷಣ ಪದ್ಧತಿ ಬಹುಮಟ್ಟಿಗೆ ಅಪೂರ್ಣ.
- ವಿದ್ಯಾ ಸಂಸ್ಥೆಗಳ ಆಗುಹೋಗುಗಳನ್ನು ರೂಢಿಸುವವರು ಗಡಿಯಾರ ನೋಡಿಕೊಂಡು ಸಂಸ್ಥೆಗಳನ್ನು ಕಟ್ಟುವುದಕ್ಕಾಗುವುದಿಲ್ಲ.
- ವ್ಯಾಪಾರಿ ಮನೋಭಾವದ, ಚೌಕಾಸಿ ಮಾಡುವ, ನಿತ್ಯ ಗೋಣಗುವ ಉಪಾಧ್ಯಾಯರು, ವಿದ್ಯಾರ್ಥಿಗಳಿಗೊಂದು ಪೀಡೆ, ದೇಶಕ್ಕೊಂದು ಶಾಪ, ಮೈಗಳ್ಳ ಉಪಾಧ್ಯಾಯರಿಗೆ ನೆಪಗಳ ಮಿತಿಯಿಲ್ಲ.

– ಡಾ. ಎಚ್. ಎನ್.





## ಅಧ್ಯಾಪಕರ ಸಾಧನೆ

**ಶ್ರೀ ಸಿ. ಆರ್. ಪ್ರಕಾಶ್**

**ನಿರ್ದೇಶಕರು ದೈಹಿಕ ಶಿಕ್ಷಣ ವಿಭಾಗ**

ಇವರು ಬೆಂಗಳೂರು ಕೇಂದ್ರ ವಿಶ್ವ ವಿದ್ಯಾಲಯದ ಕ್ರೀಡಾ ನೀತಿ ನಿಯಮಗಳನ್ನು ರೂಪಿಸಲು ರಚಿಸಲ್ಪಟ್ಟ ಸಮಿತಿಯ ಸದಸ್ಯರಾಗಿದ್ದು, ವಿಶ್ವವಿದ್ಯಾಲಯದ ಹಾಕಿ ತಂಡಕ್ಕೆ ವ್ಯವಸ್ಥಾಪಕರಾಗಿ ನೇಮಕಗೊಂಡಿದ್ದಾರೆ. ಇವರ ನೇತೃತ್ವದಲ್ಲಿ ತಂಡವು ಗ್ವಾಲಿಯರ್‌ನಲ್ಲಿ ನಡೆದ ಅಖಿಲ ಭಾರತ ವಿಶ್ವವಿದ್ಯಾಲಯಗಳ ಹಾಕಿ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಸದರಿ ತಂಡವು ದೆಹಲಿಯಲ್ಲಿ ನಡೆಯಲಿರುವ **'ಖೇಲೋ ಇಂಡಿಯಾ'**ಗೆ ಆಯ್ಕೆಯಾಗಿರುತ್ತದೆ. ಇವರಿಗೆ ಅಭಿನಂದನೆಗಳು.



**ಬೆಂಗಳೂರು ಕೇಂದ್ರ ವಿ. ವಿ. ಯ ಉಪಕುಲಪತಿ ಪ್ರೊ. ಎಸ್. ಜಾಫೆಟ್ ರವರೊಂದಿಗೆ ಶ್ರೀ. ಸಿ. ಆರ್. ಪ್ರಕಾಶ್ ಹಾಗೂ ಹಾಕಿ ಆಟಗಾರರ ತಂಡ.**

**ಶ್ರೀಮತಿ ಸಂಧ್ಯಾ ಪ್ರಶಾಂತ್**



ವಾಣಿಜ್ಯ ವಿಭಾಗದ ಮುಖ್ಯಸ್ಥ–ರಾಗಿರುವ ಇವರು ಡಾನ್‌ಬಾಸ್ಕೊ ಸಂಸ್ಥೆಯವರು ಆಗಸ್ಟ್ 2019 ರಲ್ಲಿ ಆಯೋಜಿಸಿದ್ದ ಒಂದು ವಾರದ 'Faculty Development on HR Analytics' ಕಾರ್ಯ–ಕ್ರಮದಲ್ಲಿ ಹಾಗೂ SSMRV ಕಾಲೇಜಿನವರು ಆಯೋಜಿಸಿದ್ದ 'Quality Assistance in Higher Education' ಎಂಬ ವಿಚಾರ ಸಂಕಿರಣದಲ್ಲಿ ಭಾಗವಹಿ–ಸಿರುತ್ತಾರೆ. ಇವರಿಗೆ ಅಭಿನಂದನೆಗಳು.

**ಶ್ರೀಮತಿ ತನುಜ ಆರ್.**

ಉಪನ್ಯಾಸಕಿ – ಕನ್ನಡ ವಿಭಾಗ

ಸಮಷ್ಟಿ ನಾಟಕ ತಂಡದ ನಟಿಯೂ ಆಗಿರುವ ಶ್ರೀಮತಿ ತನುಜ ಆರ್. ಹಲವು ವರ್ಷಗಳಿಂದ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸುಮಾರು



50 ನಾಟಕಗಳಲ್ಲಿ ಅಭಿನಯಿಸಿರುವ ಇವರು 2019ರಲ್ಲಿ 'ಉಡುಪಿ ರಂಗಭೂಮಿ' 2019 ರಲ್ಲಿ ನಡೆದ 40ನೇ ರಾಜ್ಯ ಮಟ್ಟದ ಕನ್ನಡ ನಾಟಕ ಸ್ಪರ್ಧೆಯಲ್ಲಿ ಸಮಷ್ಟಿ ತಂಡದ 'ನೀರು ಕುಡಿಸಿದ ನೀರೆಯರು' ನಾಟಕದಲ್ಲಿನ ಅಭಿನಯಕ್ಕಾಗಿ 'ಮೆಚ್ಚುಗೆ ನಟಿ' ಬಹುಮಾನವನ್ನು ಪಡೆದಿರುತ್ತಾರೆ ಇವರಿಗೆ ಅಭಿನಂದನೆಗಳು.

ನಮ್ಮ ಕಾಲೇಜಿನ ಉಪನ್ಯಾಸಕರಾದ ಶ್ರೀಮತಿ ಸುವರ್ಣ ಕೆ. ಎಂ., ಮೋಹನಪ್ರಿಯ, ರಾಜಶ್ರೀ ವಾಲ್ವೇಕರ್ ಮತ್ತು ಶ್ರೀ ಮೃತ್ಯುಂಜಯ ವಿಶ್ವಕರ್ಮ ಇವರುಗಳು, ಐ.ಐ.ಎಚ್.ಎಂ., ಇಂದಿರಾನಗರ, ಇವರು ನಡೆಸಿದ ಟೀಚರ್ ಚೆಫ್ ಎಂಬ ಅಡುಗೆ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ ಎಲ್ಲಾ ಅಧ್ಯಾಪಕರಿಗೂ ಅಭಿನಂದನೆಗಳು.



## ಗಾಂಧಿ ಜಯಂತಿ

ಗಾಂಧಿ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಮಹಾತ್ಮಾ ಗಾಂಧಿಯವರ 150ನೇ ಜನ್ಮದಿನವನ್ನು ಅಂದು ಬೆಳಗ್ಗೆ 9.30ಕ್ಕೆ ಆಚರಿಸಲಾಯಿತು. ಅಂದು ಶ್ರೀ ಎನ್. ಎಸ್. ಶಂಕರ್, ಹಿರಿಯ ಪತ್ರಕರ್ತರು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಹಾತ್ಮ ಗಾಂಧಿಯವರ ವಿಚಾರಧಾರೆಯ ಬಗ್ಗೆ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಗಾಂಧಿ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ನಡೆದ ಚರ್ಚೆ, ಪ್ರಬಂಧ ಹಾಗೂ ರಸಪ್ರಶ್ನೆ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.



## ಅಂತರ ಕಾಲೇಜು ಸ್ಪರ್ಧೆಗಳು

ನ್ಯಾಷನಲ್ ಕಾಲೇಜು ಜಯನಗರದಲ್ಲಿ ಆಯೋಜಿಸಿದ್ದ Comptech Fest - 2019 ರಲ್ಲಿ DO Doodle ಸ್ಪರ್ಧೆಯಲ್ಲಿ ದ್ವಿತೀಯ ಪಿಯುಸಿ 'ಬಿ' ವಿಭಾಗದ ಮಹಮದ್ ಯೂನಸ್ ಹಾಗೂ ವೇದೀಶ್ ಪ್ರಥಮ ಮಹುಮಾನವನ್ನು ಎಂ. ಕಲೈಸೆಲ್ವನ್ ಮತ್ತು ಮುರಳಿ ಜಿ. ಕೆ. ದ್ವಿತೀಯ ಬಹುಮಾನವನ್ನು ಪಡೆದಿರುತ್ತಾರೆ. ಹಾಗೆಯೇ ಪ್ರಥಮ ಪಿಯುಸಿ 'ಬಿ' ವಿಭಾದ ಯೋಗೇಶ್ ಮತ್ತು ತಂಡದವರು ಸಮೂಹ ನೃತ್ಯದಲ್ಲಿ ಪ್ರಥಮ ಬಹುಮಾನವನ್ನು ಪಡೆದುಕೊಂಡಿದ್ದಾರೆ.

## ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು



ವಿಶ್ವನಾಥ್ ಎಂ. – ವಿಜ್ಞಾನ ವಿಭಾಗ



ಭಾರ್ಗವ್ ಜಿ. ಎಸ್. – ವಿಜ್ಞಾನ ವಿಭಾಗ



ಅಭಿಷೇಕ್ ಎಂ. – ವಾಣಿಜ್ಯ ವಿಭಾಗ



ಮೇಘ ಎನ್. – ವಾಣಿಜ್ಯ ವಿಭಾಗ



ಪ್ರಿಯಾಂಕ ಎಸ್. – ಕಲಾ ವಿಭಾಗ



ವೈಷ್ಣವಿ – ಕಲಾ ವಿಭಾಗ

# ಡಾ. ಎಚ್. ಎನ್. ಬದುಕಿನ ಅಪೂರ್ವ ಕ್ಷಣಗಳು



ಅಂದಿನ ರಾಷ್ಟ್ರಪತಿಗಳಾದ ಶ್ರೀ ವಿ. ವಿ. ಗಿರಿಯವರೊಂದಿಗೆ



ಡಾ. ಎಚ್. ಎನ್. ಜೊತೆ ಡಾ. ಎ. ಎಚ್. ರಾಮರಾವ್ ಮತ್ತು ಅಧ್ಯಾಪಕರು.



ಶ್ರೀ ಟಿ. ಕೆ. ತುಕೋಳ್ ಅವರಿಂದ ಬೆಂಗಳೂರು ವಿ.ವಿ.ಯ ಉಪಕುಲಪತಿ ಸ್ಥಾನಕ್ಕೆ ಅಧಿಕಾರ ವಹಿಸಿಕೊಂಡದ್ದು.



ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಂ. ಕೃಷ್ಣ ರೊಂದಿಗೆ



ಗುರುಗಳಾದ ಶ್ರೀ ಎಂ. ಎಸ್. ನಾರಾಯಣರಾಯರೊಂದಿಗೆ



ಅಂದಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರೊಂದಿಗೆ



ನ್ಯಾಷನಲ್ ಕಾಲೇಜಿಗೆ ಸರ್ ಸಿ. ವಿ. ರಾಮನ್ ಭೇಟಿಯಿತ್ತಾಗ



ಡಾ. ಎಚ್. ಎನ್. ಜೊತೆ ಪ್ರೊ. ಎಸ್. ಎನ್. ನಾಗರಾಜರೆಡ್ಡಿಯವರು



ಹೊಸೂರಿನ ಸ್ವಗೃಹದಲ್ಲಿ



ಪರಮಪೂಜ್ಯ ಶ್ರೀ ಶಿವಕುಮಾರ ಸ್ವಾಮಿಜಿಯವರೊಂದಿಗೆ



ಅಂದಿನ ಪ್ರಧಾನಿ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರೊಂದಿಗೆ



ನ್ಯಾಷನಲ್ ಕಾಲೇಜಿನ ಬ್ಯಾಸ್ಕೆಟ್‌ಬಾಲ್ ತಂಡದೊಂದಿಗೆ



ಅಂದಿನ ರಾಷ್ಟ್ರಪತಿ ಡಾ. ಎ. ಪಿ. ಜೆ. ಅಬ್ದುಲ್ ಕಲಾಂ ರವರೊಂದಿಗೆ

ವಿನ್ಯಾಸ ಮತ್ತು ಮುದ್ರಣ : ಅಕ್ಷರ ಪ್ರಿಂಟರ್ಸ್ 080-26624082, 9845884563